ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬೆಂಗಳೂರು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2026ನೇ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳನ್ನು ನಡೆಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ರಾಜ್ಯ ಸರ್ಕಾರವು ಸೋಮವಾರ ಅಧಿಕೃತವಾಗಿ ಅನುಮತಿ ನೀಡಿದೆ.

17 ಮಾರ್ಚ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 7 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತವು ರಕ್ಷಣಾ ಕ್ಷೇತ್ರದಲ್ಲಿ ಏಕೆ ಸ್ವಾವಲಂಬಿಯಾಗಬೇಕು? » 2



ಬೆಳಿಗ್ಗೆಯಿಂದಲೇ ಮದ್ಯ ಮಾರಾಟ: ಪರವಾನಗಿ ರದ್ದುಪಡಿಸಿ



ಕೇಂದ್ರ ಸಚಿವರ ಮೊರೆ ಹೋದ ಜಿಲ್ಲಾ ಬೆಳೆಗಾರರು » 4

# ಶಾಸಕರ ಪ್ರಶ್ನೆಗೆ ಸಿಗದ ಉತ್ತರ: ಸ್ಪೀಕರ್ ಸಭಾತ್ಯಾಗ

## ಸರ್ಕಾರ ಉತ್ತರಿಸಲಿಲ್ಲವೆಂದರೆ ಸದನಕ್ಕೆ ಏಕೆ ಬರಬೇಕು: ಯು.ಟಿ.ಖಾದರ್ ಗರಂ

• ಪ್ರಜೋದಯ ವರದಿ

**ಬೆಂಗಳೂರು:** ಶಾಸಕರು ಕೇಳಿದ ಲಿಖಿತ ಪ್ರಶ್ನೆಗಳಿಗೆ ಉತ್ತರಿಸಲು ಸಚಿವರು, ಕಾರ್ಯದರ್ಶಿಗಳು ವಿಫಲವಾಗಿದ್ದಾರೆಂದು ಸರ್ಕಾರದ ವಿರುದ್ಧ ತೀವ್ರ ಅಸಮಾಧಾನಗೊಂಡು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಕಲಾಪ ನಡೆಸದೆ ಪೀಠದಿಂದ ಎದ್ದು ಹೋದ ಪ್ರಸಂಗ ವಿಧಾನಸಭೆಯಲ್ಲಿ ಸೋಮವಾರ ನಡೆಯಿತು.

230 ಲಿಖಿತ ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಮಾತ್ರ ಸಚಿವರಿಂದ ಉತ್ತರ ಬಂದಿದೆ. ಉತ್ತರಗಳನ್ನು ನೀಡುವಂತೆ ಮೊನ್ನೆಯೇ ಮಂತ್ರಿಗಳು, ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇವೆ. ಸದನ ನಡೆಸುವುದು ಮಂತ್ರಿಗಳಿಗಾಗಿ ಅಲ್ಲ, ಶಾಸಕರ ಸಮಸ್ಯೆಗಳಿಗಾಗಿ. ಎಲ್ಲಾ ಪಕ್ಷಗಳ ಶಾಸಕರೂ ಪ್ರಶ್ನೆಗಳನ್ನು ಕೇಳುತ್ತಾರೆ. ನಿಯಮಾವಳಿ ಪ್ರಕಾರ ಕೇಳಿದ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಲಿಲ್ಲ ಎಂದರೆ ಹೇಗೆ. ಹೀಗಾದರೆ ಶಾಸಕರು ಸದನಕ್ಕೆ ಏಕೆ ಬರಬೇಕು ಹೇಳಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ವಿಪಕ್ಷ ನಾಯಕ ಆರ್.ಅಶೋಕ್ ಅವರು ಸರ್ಕಾರವನ್ನು ತರಾಟೆ ತೆಗೆದುಕೊಂಡು, ಸಭಾಧ್ಯಕ್ಷರು ನಾಲ್ಕು ಬಾರಿ ಎಚ್ಚರಿಕೆ ನೀಡಿದ್ದಾರೆ. ಆದರೆ ಶೇ.50 ರಷ್ಟು



ಪಾಲನೆ ಯಾಗಿಲ್ಲ. ಐದನೇ ಬಾರಿ ಎಚ್ಚರಿಕೆ ಮಾಡಿ, ರೆಕಾರ್ಡ್ ಆಗಲಿ. ನೀವು ಹೇಳಿದರೂ ಯಾರೂ ಎಚ್ಚೆತ್ತು ಕೊಂಡಿಲ್ಲ. ದೇವರ ರೀತಿ ಬಂದು ಮನೆಗೆ ಹೋಗುತ್ತಾರೆಂದು ದೂರಿದರು.

ಮಾತು ಮುಂದುವರೆಸಿದ ಸಭಾಧ್ಯಕ್ಷರು, ಸರಿಯಾದ ಸಮಯಕ್ಕೆ ಮಂತ್ರಿಗಳು ಸದನಕ್ಕೆ ಬರುವುದಿಲ್ಲ. ಹಿಂದೆಯೂ ಈ ಬಗ್ಗೆ ಸೂಚನೆ ನೀಡಿದ್ದೇನೆ. ಈಗಾಗಲೇ ನಾಲ್ಕು ಬಾರಿ ಸೂಚನೆ ನೀಡಿದ್ದೇನೆ. ಇಂದೂ ಸೇರಿ ಐದನೇ ಬಾರಿಯೂ ಸುಧಾರಿಸದಿದ್ದರೆ ಏನು ಮಾಡೋದು. ಸುಧಾರಣೆ ಕಾಣಲೇ ಇಲ್ಲ, ಸದನ ನಡೆಸೋದು ಹೇಗೆ? ಹೀಗಾಗಿ, ಸಚಿವರು ಬಂದು ಸ್ಪಷ್ಟನೆ ನೀಡುವವರೆಗೂ ಸದನ ನಡೆಸೋದಿಲ್ಲ ಎಂದು ಹೇಳಿ ಸದನದಿಂದ ಹೊರ ನಡೆದರು. ಸ್ಪೀಕರ್ ನಡೆಗೆ ವಿಪಕ್ಷದ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.



**ಸಿಎಂ ಸಂಧಾನ ಯಶಸ್ವಿ**

ಸರ್ಕಾರದ ನಡೆಯಿಂದ ಅಸಮಾಧಾನಗೊಂಡ ಸ್ಪೀಕರ್ ಯು.ಟಿ.ಖಾದರ್ ಅವರನ್ನು ಮನವೊಲಿಸಲು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆಗಮಿಸಬೇಕಾಯಿತು. ಗೃಹ ಸಚಿವ ಡಾ.ಜಿ.ಪರಮೇಶ್ವರ ಮತ್ತು ಸತೀಶ್ ಜಾರಕಿಹೊಳಿ ಪ್ರಯತ್ನ ನಡೆಸಿದರು. ಈ ನಡುವೆ ಸಿದ್ದರಾಮಯ್ಯ ಅವರು ಸ್ಪೀಕರ್ ಯು.ಟಿ.ಖಾದರ್ ಅವರನ್ನು ಭೇಟಿ ಮಾಡಿ ಸಂಧಾನ ಸಭೆ ನಡೆಸಿ, ಸದಸ್ಯರ ಪ್ರಶ್ನೆಗೆ ಉತ್ತರಿಸುವ ಭರವಸೆ ನೀಡಿದ ಬಳಿಕ ಸದನ ನಡೆಸಲು ಸಮ್ಮತಿಸಿದರು.

**ಮೂವರು ಅಧಿಕಾರಿಗಳ ತಲೆದಂಡ**

ಸ್ಪೀಕರ್ ಸಿಟ್ಟಿಗೆ ಕಂದಾಯ, ಅಲ್ಪಸಂಖ್ಯಾತ ಹಾಗು ಪಿಡಬ್ಲ್ಯೂಡಿ ಇಲಾಖೆಗಳ ಒಟ್ಟು ಮೂವರು ಅಧಿಕಾರಿಗಳ ತಲೆದಂಡವಾಗಿದೆ.

### ಹಕ್ಕುಚ್ಯುತಿ ಮಂಡನೆಗೆ ರೇವಣ್ಣ ಒತ್ತಾಯ



ನಮಗೆ ಅಧಿಕಾರಿಗಳಿಂದ ಅವಮಾನವಾಗಿದೆ ಎಂದು ವಿಧಾನಸಭೆಯಲ್ಲಿ ಹೆಚ್.ಡಿ.ರೇವಣ್ಣ ಅವರು ಸೋಮವಾರ ಮಧ್ಯಾಹ್ನ ಭೋಜನ ವಿರಾಮದ ಬಳಿಕ ಸದನ ಆರಂಭಗೊಂಡ ಸಂದರ್ಭದಲ್ಲಿ ಅಧಿಕಾರಿಗಳ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಒತ್ತಾಯಿಸಿದರು. ಇದು ನನಗೆ ಮತ್ತು ಕ್ಷೇತ್ರಕ್ಕೆ ಮಾಡಿದ ಅವಮಾನವಾಗಿದೆ ಎಂದರು.

ಹೊಳೆನರಸೀಪುರ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವದಲ್ಲಿ ಜಿಲ್ಲೆಯ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲನೆ ಮಾಡಿಲ್ಲ. ಅದರಿಂದ ಶಾಸಕರ ಹಕ್ಕಿಗೆ ಧಕ್ಕೆ ಆಗಿದೆ. ಇದಕ್ಕೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು.

ಜೊತೆಗೆ ಸಮರ್ಪಕ ಉತ್ತರ ಕೊಡದ 3-4 ಇಲಾಖೆ ಕಾರ್ಯದರ್ಶಿಗಳಿಗೆ ನೋಟೀಸ್ ನೀಡುವಂತೆ » ನಾಲ್ಕನೇ ಪುಟದಲ್ಲಿ

# ಕಲಾಪಕ್ಕೆ ಅಡ್ಡಿ: ಕಾಂಗ್ರೆಸ್ ಸದಸ್ಯರಿಗೆ ಬುದ್ಧಿ ಹೇಳಿ


## ಸೋನಿಯಾ ಗಾಂಧಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಪತ್ರ

• ಪ್ರಜೋದಯ ವರದಿ

**ನವದೆಹಲಿ:** ಸಂಸತ್ ಅಧಿವೇಶನದಲ್ಲಿ ಕಾಂಗ್ರೆಸ್ ಸದಸ್ಯರಿಂದ ಕಲಾಪಕ್ಕೆ ಅಡ್ಡಿ ಉಂಟಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರಾಜ್ಯಸಭೆ ಸದಸ್ಯರೂ ಆಗಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿ ಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸು ತ್ತಿದ್ದು, ಅದರಲ್ಲಿಯೂ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗು ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುವುದು ಮಾಡುತ್ತಿದ್ದಾರೆ. ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆಂದು ಆತಂಕ ವ್ಯಕ್ತಪಡಿಸಿದ್ದಾರೆ.

ನನ್ನ ರಾಜಕೀಯ ಜೀವನದ ತೊಂಬತ್ತರಷ್ಟು ದೀರ್ಘಾವಧಿಯ



ಕಾಲವನ್ನು ಪ್ರತಿ ಪಕ್ಷದಲ್ಲಿಯೇ ಕಳೆದಿದ್ದೇನೆ. ನೀವು ಕೂಡ ಹೆಚ್ಚು ಕಾಲ ವಿರೋಧ ಪಕ್ಷದಲ್ಲಿಯೇ ಇದ್ದೀರಿ. ಪ್ರತಿಪಕ್ಷದ ಹೊಣೆಗಾರಿಕೆ ಹಾಗು ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು, ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು. ಪ್ರಸಕ್ತ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯರ ವರ್ತನೆ ನನಗೆ ನೋವುಂಟು ಮಾಡಿದೆ. ಪ್ರತಿಪಕ್ಷದಲ್ಲಿ ಇದ್ದರೂ ಸಂಸತ್ತಿನ ಘನತೆ ಮತ್ತು ಸಂಪ್ರದಾಯ ಗಳನ್ನು ಕಾಪಾಡಿಕೊಳ್ಳಲು ಶ್ರಮಿಸಿದ್ದೇನೆಂದು ಬೇಸರ ವ್ಯಕ್ತಪಡಿಸಿದ್ದಾರೆ.

ತಮ್ಮ ಪಕ್ಷದ ಸದಸ್ಯರು ವರ್ತನೆಯನ್ನು ಸರಿಪಡಿಸಿಕೊಂಡು ಸಂಸದೀಯ ವ್ಯವಸ್ಥೆಯ ಪಾವಿತ್ರ್ಯತೆಯನ್ನು ಎತ್ತಿಹಿಡಿಯುತ್ತಾರೆಂದು ನಿರೀಕ್ಷಿಸಿದ್ದೇ. ಅದು ಆಗಲಿಲ್ಲ. ನಿಮ್ಮ ಸದಸ್ಯರು ಸಂಸತ್ತಿನ ಆವರಣದಲ್ಲಿ ಮತ್ತು ಸಂಸತ್ತಿನ ಒಳಗೆ ಪ್ರಚೋದನಾತ್ಮಕ ರೀತಿಯಲ್ಲಿ ವರ್ತಿಸಿ, ಸಂಸತ್ತಿನ ಕಲಾಪಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಹೀಗಾಗಿ ತಮಗೆ ಪತ್ರ ಬರೆಯುವ ಸನ್ನಿವೇಶ ಸೃಷ್ಟಿಯಾಯಿತು ಎಂದು ತಿಳಿಸಿದ್ದಾರೆ.

ಜವಾಹರಲಾಲ್ ನೆಹರು, ಸರ್ದಾರ್ ವಲಬ್‌ಭಾಯಿ ಪಟೇಲ್, ಬಿ.ಆರ್.ಅಂಬೇಡ್ಕರ್ ಮತ್ತು ಮೌಲಾನಾ ಅಬ್ದುಲ್‌ಕಲಾಂ ಆಜಾದ್ ಮುಂತಾದವರು ಹಾಕಿ ಕೊಟ್ಟ ಬುನಾದಿ ಹಾಗು ಅವರ ಮಾರ್ಗದರ್ಶನದ ಮೇಲೆ ಪರಂಪರೆಯೂ ನಿರ್ಮಿತವಾಗಿದೆ. ನನ್ನ ಸುದೀರ್ಘ ಸಂಸದೀಯ ಅನುಭವ ದಲ್ಲಿ ಇತ್ತೀಚೆಗೆ ಕಂಡಂತಹ ಅವ್ಯವಸ್ಥೆ ಮತ್ತು ಅಡಚಣೆಯನ್ನು ನಾನು ಎಂದಿಗೂ ನೋಡಿಲ್ಲ. ನನ್ನ ಇಡೀ ರಾಜಕೀಯ ಜೀವನದಲ್ಲಿ ಸಂಸತ್ತಿನ ಪ್ರಚೋದನ್ಮಕವಾಗಿ ವರ್ತಿಸುವುದು, ಪ್ರತಿಭಟಿಸುವುದು, » ನಾಲ್ಕನೇ ಪುಟದಲ್ಲಿ

# ಪರೀಕ್ಷಾ ಸಿಬ್ಬಂದಿ ಎಡವಟ್ಟು: ಪ್ರಶ್ನೆಪತ್ರಿಕೆ ಅದಲು ಬದಲು

• ಪ್ರಜೋದಯ ವರದಿ

- ಪುನರಾವರ್ತಿತರಿಗೆ ನೀಡಬೇಕಾದ ಪ್ರಶ್ನೆ ಪತ್ರಿಕೆ ಹೊಸಬರಿಗೆ
- ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು ಕಣ್ಣೀರು

**ಬೇಲೂರು:** ದ್ವಿತೀಯ ಪಿಯುಸಿ ಕಂಪ್ಯೂಟರ್ ಸೈನ್ಸ್ ಅಂತಿಮ ಪರೀಕ್ಷೆಯ ಪ್ರಶ್ನೆ ಪತ್ರಿಕೆ ವಿತರಣೆಯಲ್ಲಿ ಪರೀಕ್ಷಾ ಕೇಂದ್ರದ ಸಿಬ್ಬಂದಿ ಮಾಡಿದ ಎಡವಟ್ಟಿನಿಂದ ವಿದ್ಯಾರ್ಥಿನಿಯರು ಅನುತ್ತೀರ್ಣರಾಗುವ ಆತಂಕದಲ್ಲಿ ಕಣ್ಣೀರಿಡುವಂತಾಗಿದೆ.

ಸೋಮವಾರಪಟ್ಟಣದ ಬಿಕ್ಕೋಡು ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದ ರೂಮ್ ನಂ.6ರಲ್ಲಿ ಕಂಪ್ಯೂಟರ್ ಸೈನ್ಸ್ ಪರೀಕ್ಷೆ ಬರೆಯುತ್ತಿದ್ದ ಆರು ಮಂದಿ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಸಿಬ್ಬಂದಿ, ರಿಪೀಟರ್ ವಿದ್ಯಾರ್ಥಿಗಳಿಗೆ ನೀಡಬೇಕಾದ ಹಳೆಯ ಪಠ್ಯಕ್ರಮದ ಪ್ರಶ್ನೆಪತ್ರಿಕೆಯನ್ನು ಈ ವರ್ಷದ ಹೊಸ ಪಠ್ಯಕ್ರಮದ ವಿದ್ಯಾರ್ಥಿನಿಯರಿಗೆ ನೀಡಿದ್ದರಿಂದ ಗೊಂದಲ ಉಂಟಾಗಿದೆ.

ಪರೀಕ್ಷೆ ಮುಗಿದ ಬಳಿಕ ಈ ತಪ್ಪು ಬೆಳಕಿಗೆ ಬಂದಿದ್ದು, ವಿದ್ಯಾರ್ಥಿನಿಯರನ್ನು ಮತ್ತೆ ಪರೀಕ್ಷಾ ಕೊಠಡಿಗೆ ಕರೆದು ಸರಿಯಾದ ಪ್ರಶ್ನೆಪತ್ರಿಕೆ ನೀಡಿ ಬರೆಯಲು ಅವಕಾಶ ನೀಡ ಲಾಗಿದೆ.



> **ಪ್ರಶ್ನೆಪತ್ರಿಕೆ ಅದಲುಬದಲಾಗಿರುವ ಬಗ್ಗೆ ವಿದ್ಯಾರ್ಥಿಗಳಿಂದ ಅಧಿಕೃತ ದೂರು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಯಾಗಿಲ್ಲ ಎಂದು ತಿಳಿಸಿದ್ದಾರೆ.**
> **-ಗಣಪತಿ, ಪ್ರಭಾರಿ ಉಪನಿರ್ದೇಶಕ, ಪದವಿ ಪೂರ್ವ ಶಿಕ್ಷಣ ಇಲಾಖೆ**

3 ಗಂಟೆಗಳ ಅವಧಿಯ ಪರೀಕ್ಷೆಗೆ ಕೇವಲ 30 ರಿಂದ 45 ನಿಮಿಷಗಳ ಕಾಲಾವಕಾಶ ನೀಡಿರುವುದರಿಂದ ವಿದ್ಯಾರ್ಥಿನಿಯರ ಆತಂಕ್ಕಕೆ ಕಾರಣವಾಗಿದೆ.

ಈ ಬಗ್ಗೆ ಸರ್ವೋದಯ ಕಾಲೇಜಿನ ಪ್ರಾಂಶುಪಾಲ ಮಲ್ಲೇಶಗೌಡ ಪ್ರತಿಕ್ರಿಯಿಸಿ, ಪರೀಕ್ಷಾ ಕೇಂದ್ರದ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳ ಭವಿಷ್ಯ ಹಾನಿಯಾಗಬಾರದು. ಪರೀಕ್ಷೆಗೆ ಮೊದಲು ಪ್ರತಿ ಕಾಲೇಜಿನಿಂದ ಹಳೆಯ ಹಾಗು ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ » ನಾಲ್ಕನೇ ಪುಟದಲ್ಲಿ

# ಆಲಿಕಲ್ಲು ಸಹಿತ ಧಾರಾಕಾರ ಮಳೆ: ನಗರದಲ್ಲಿ ಜನರ ಪರದಾಟ

## ವಾಹನ ಸಂಚಾರಕ್ಕೆ ಅಡಚಣೆ | ಸಂಕಷ್ಟಕ್ಕೆ ಸಿಲುಕಿದ ಬೀದಿ ವ್ಯಾಪಾರಿಗಳು

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಸೋಮವಾರ ಸಂಜೆ ದಿಢೀರ್ ಸುರಿದ ಆಲಿಕಲ್ಲು ಸಹಿತ ಧಾರಾಕಾರ ಮಳೆಯಾಗಿ ಜನಜೀವನ ಕೆಲಕಾಲ ಅಸ್ತವ್ಯಸ್ತಗೊಂಡಿತು. ಸಂಜೆ ಸುಮಾರು 4.30ರ ವೇಳೆಗೆ ಆರಂಭವಾದ ಮಳೆ ಒಂದು ಗಂಟೆಗೂ ಹೆಚ್ಚು ಕಾಲ ಸುರಿದು ನಗರದಲ್ಲಿನ ಹಲವು ರಸ್ತೆಗಳು ನೀರಿನಿಂದ ತುಂಬಿ ಕೆರೆಯಂತಾದ ದೃಶ್ಯ ಕಂಡುಬಂತು.

ದಿಢೀರ್ ಸುರಿದ ಮಳೆಯಿಂದ ಸಾರ್ವಜನಿಕರು ತತ್ತರಿಸುವಂತಾಯಿತು. ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ಜನರು ಹಾಗು ಶಾಲಾ-ಕಾಲೇಜುಗಳಿಂದ ವಾಪಸ್ಸಾಗುತ್ತಿದ್ದ ವಿದ್ಯಾರ್ಥಿಗಳು ಮಳೆಯಲ್ಲಿ ಸಿಲುಕಿಕೊಂಡರು. ಗುಡುಗು ಸಹಿತ ಸುರಿದ ಮಳೆಯ ತೀವ್ರತೆಯಿಂದ ಜನರು ಆತಂಕಗೊಂಡು ಸಿಕ್ಕ ಸಿಕ್ಕ ಕಟ್ಟಡಗಳು, ಅಂಗಡಿಗಳು ಹಾಗು ಮಳೆಯಿಂದ ರಕ್ಷಣೆ ದೊರೆಯುವ ಸ್ಥಳಗಳಲ್ಲಿ





ಆಶ್ರಯ ಪಡೆದರು.

ಮಳೆಯೊಂದಿಗೆ ಭಾರೀ ಪ್ರಮಾಣದಲ್ಲಿ ಆಲಿಕಲ್ಲುಗಳು ಸುರಿದ ಪರಿಣಾಮ ಕೆಲ ವಾಹನಗಳ ಗಾಜುಗಳು ಹಾನಿಗೊಂಡಿರುವುದು ಕಂಡು ಬಂದಿದೆ. ಕೆಲವು ಮನೆಗಳ ಹಾಗು ಕಟ್ಟಡಗಳ ಹೆಂಚುಗಳಿಗೂ ಹಾನಿಯಾಗಿದೆ. ಆಲಿಕಲ್ಲುಗಳು ರಸ್ತೆಯ ಮೇಲೆ ಬಿದ್ದ ಪರಿಣಾಮ ಕೆಲಕಾಲ ರಸ್ತೆ ಬಿಳಿಯಾಗಿ ಕಾಣಿಸಿಕೊಂಡ ದೃಶ್ಯಗಳು ನಗರದಲ್ಲಿ ಕಂಡು ಬಂದವು. ನಗರದ ಎಂ.ಜಿ.ರಸ್ತೆ, ಬಿ.ಎಂ.ರಸ್ತೆ, ಎನ್.ಆರ್.ವೃತ್ತದ ತುಂಬೆಲ್ಲ ಆಲಿಕಲ್ಲು ರಾಶಿ ರಾಶಿ ಬಿದ್ದಿದ್ದವು.

ಮಳೆ ನೀರು ರಸ್ತೆಗಳಲ್ಲಿ ಹರಿದು ಸಂಚಾರಕ್ಕೆ ಅಡಚಣೆ ಉಂಟಾಯಿತು. ತಗ್ಗು ಪ್ರದೇಶಗಳಲ್ಲಿ ನೀರು ಜಮಾಯಿಸಿದ ಪರಿಣಾಮ ವಾಹನಗಳು ನಿಧಾನವಾಗಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಜಿಲ್ಲಾ ಕ್ರೀಡಾಂಗಣದ ಪ್ರವೇಶದ್ವಾರದ ಬಳಿಯ ರಸ್ತೆ ಸಂಪೂರ್ಣವಾಗಿ ನೀರಿನಿಂದ ತುಂಬಿ ಕೆರೆಯಂತಾಗಿತ್ತು. ಅದರಿಂದ ಆ ಭಾಗದಲ್ಲಿ ವಾಹನ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತು. ಮಳೆಯಿಂದ ಕ್ರೀಡಾಂಗಣ ಕೆಸರು ಮಯವಾಗಿತ್ತು.

ಏಕಾಏಕಿ ಸುರಿದ ಮಳೆಯಿಂದ ಬೀದಿ ಬದಿ ವ್ಯಾಪಾರಿಗಳು ಸಂಕಷ್ಟ ಅನುಭವಿಸಿದರು. ಹಣ್ಣು, ತರಕಾರಿ ಹಾಗು ಇತರೆ ವಸ್ತುಗಳನ್ನು ಮಾರಾಟಕ್ಕೆ ಇಟ್ಟಿದ್ದ ವ್ಯಾಪಾರಿಗಳು ಅವುಗಳನ್ನು ಮಳೆಯಿಂದ ರಕ್ಷಿಸಲು ತೀವ್ರ » ನಾಲ್ಕನೇ ಪುಟದಲ್ಲಿ

### ಸಿಡಿಲು ಬಡಿದು ಹಸು ಸಾವು



ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಬಳದರೆ ಗ್ರಾಮದಲ್ಲಿ ಸಿಡಿಲು ಬಡಿದು ಸೋಮವಾರ ಹಸು ಮೃತಪಟ್ಟಿದೆ.

ಸಂಜೆ 6 ಗಂಟೆಗೆ ಮೋಡ ಕವಿದ ವಾತಾವರಣ ಸೃಷ್ಟಿಯಾಗಿ 7 ರಿಂದ ಮಿಂಚು, ಗುಡುಗು ಹಾಗು ಅಬ್ಬರದ ಗಾಳಿಯೊಂದಿಗೆ ಮಳೆ ಪ್ರಾರಂಭವಾಯಿತು. ಮಳೆ ಕಡಿಮೆಯಿದ್ದರೂ ಗುಡುಗು ಹಾಗು ಗಾಳಿಯ ಅಬ್ಬರ ಜೋರಾಗಿತ್ತು.

ಮನೆಯ ಸಮೀಪ ತೆಂಗಿನ ಮರದಡಿ ಕಟ್ಟಿದ್ದ ವಿನೋದಮ್ಮ ಅವರಿಗೆ ಸೇರಿದ ಹಸು ಅಸುನೀಗಿದೆ.

### ಇನ್ನೋವಾ ಕಾರು ಡಿಕ್ಕಿ: ಬಾಲಕ ಸಾವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಇನ್ನೋವಾ ಕಾರು ಡಿಕ್ಕಿಯಾಗಿ ಬೈಕ್ ಹಿಂಬದಿ ಕುಳಿತಿದ್ದ ಬಾಲಕ ಮೃತಪಟಿದ್ದು ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಸಾಲಿಗ್ರಾಮ ರಸ್ತೆಯಲ್ಲಿ ಭಾನುವಾರ ನಡೆದಿದೆ.

ಹಳ್ಳಿಮೈಸೂರು ಹೋಬಳಿ ಮುಕ್ಕನಹಳ್ಳಿ ಗ್ರಾಮದ ಅರ್ಮಾನ್ ಬೇಗ್ (16) ಮೃತ ದುರ್ದೈವಿ. ಕುಪ್ಪಳ್ಳಿ ಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದ ಬಾಲಕ ರಜೆ ಹಿನ್ನಲೆಯಲ್ಲಿ ಅದೇ ಗ್ರಾಮದ ಅಯಾನ್ ಬೇಗ್ ಎಂಬಾತನ ಜೊತೆಗೆ ಮಸೀದಿ ಗುರು ಮಹಮ್ಮದ್ ಅಫ್ಜಲ್ ಅವರನ್ನು ಮಂಗಳವಾಡಿಗೆ ಬಿಟ್ಟು ಬರಲು ಬೈಕ್‌ನಲ್ಲಿ ತೆರಳುತ್ತಿದ್ದರು. ಅಯಾನ್ ಬೇಗ್ ಬೈಕ್ ಓಡಿಸುತ್ತಿದ್ದರೆ ಮಧ್ಯದಲ್ಲಿ ಧರ್ಮ ಗುರು ಹಾಗು ಕೊನೆಯಲ್ಲಿ ಅರ್ಮಾನ್ ಕುಳಿತಿದ್ದ. ಹೊಳೆನರಸೀಪುರ- ಸಾಲಿಗ್ರಾಮ ರಸ್ತೆಯಲ್ಲಿ ಎದುರುಗಡೆಯಿಂದ ವೇಗವಾಗಿ ಬಂದ ಇನ್ನೋವಾ ಕಾರು ಡಿಕ್ಕಿಯಾಗಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಅರ್ಮಾನ್ ಬೇಗ್ ಮೃತಪಟ್ಟಿದ್ದಾನೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರೈತ ಸಂಘದಿಂದ ಅನಿರ್ದಿಷ್ಟಾವಧಿ ಹೋರಾಟ

## ಗಣಿಗಾರಿಕೆ ಸ್ಥಗಿತಗೊಳಿಸಿ ಮೂಲಸೌಲಭ್ಯ ಕಲ್ಪಿಸುವಂತೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಕ್ರೈಸ್ತ ಧರ್ಮದ ಪವಿತ್ರ ಸ್ಥಳ ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ನಡೆಯುತ್ತಿರುವುದನ್ನು ಸ್ಥಗಿತಗೊಳಿಸಬೇಕು. ಬೇಲೂರು ತಾಲ್ಲೂಕು ಬಂಟೇನಹಳ್ಳಿ ವಾರ್ಡ್ 2ಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಬೇಕು ಹಾಗು ಹಾಸನ ನಗರದ ಬೀರನಹಳ್ಳಿ ಕೆರೆ ನಿವಾಸಿಗಳಿಗೆ ನಿವೇಶನ ಗುರುತಿಸಿ ಮನೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘ ದಿಂದ ಜಿಲ್ಲಾಧಿಕಾರಿ ಕಚೇರಿ ಮುಂದೆ ಸೋಮವಾರದಿಂದ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಲಾಗಿದೆ.

ಮೊದಲಿಗೆ ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಎನ್.ಆರ್.



ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಈ ವೇಳೆ ಮಾತನಾಡಿದ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ ಅವರು, ಆಲೂರು ತಾಲ್ಲೂಕಿನ ಹೊಸಮಠ ಗ್ರಾಮದ ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಈ ವೇಳೆ ಮಾಡುವ ಸ್ಫೋಟದಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ತೊಂದರೆಯಾಗಿದೆ ಎಂದು ಆರೋಪಿಸಿದರು.

ಬೆಟ್ಟದ ಸುತ್ತಮುತ್ತನ ಮನೆ ಬಿರುಕು ಬಿಟ್ಟಿದ್ದು, ಜನರು ಭಯದ ನಡುವೆ ಬದುಕುವಂತಾಗಿದೆ. ಭಾರೀ ವಾಹನ ನಿರಂತರವಾಗಿ ಸಂಚರಿಸುತ್ತಿರುವುದರಿಂದ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ರಸ್ತೆ ದುಸ್ಥಿತಿಯಿಂದ ಶಾಲಾ ವಾಹನಗಳು ಗ್ರಾಮಗಳಿಗೆ ಬರಲು ನಿರಾಕರಿಸುತ್ತಿದ್ದು, ಅದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆಂದು ಪೋಷಕರು ಬೇಸರ ವ್ಯಕ್ತಪಡಿಸಿದರು.

ಕಾಡು ಪ್ರಾಣಿಗಳು ನಾಡಿಗೆ ಬರುವಂತಾಗಿದೆ. ರೈತರ ಕೃಷಿ ಬೆಳೆ ಹಾಳಾಗಿ ರೈತರು ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ. ಮಳೆಗಾಲದಲ್ಲಿ ಗಣಿಗಾರಿಕೆ ಪ್ರದೇಶದ ಕಲುಷಿತ ನೀರು » ನಾಲ್ಕನೇ ಪುಟದಲ್ಲಿ

### ಏ. 11-12ರಂದು ಬೀದರ್‌ನಲ್ಲಿ ರಾಜ್ಯ ಪತ್ರಕರ್ತರ ಸಮ್ಮೇಳನ

• ಪ್ರಜೋದಯ ವರದಿ

**ಅರಸೀಕೆರೆ:** ಬೀದರ್‌ನಲ್ಲಿ ಮಾ.28 ಮತ್ತು 29ರಂದು ನಿಗದಿಯಾಗಿದ್ದ ರಾಜ್ಯ ಮಟ್ಟದ ಪತ್ರಕರ್ತರ 40ನೇ ಸಮ್ಮೇಳನವನ್ನು ಏ.11 ಮತ್ತು 12ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಹೇಳಿದರು.



ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೋರಿಕೆ ಮೇರೆಗೆ ದಿನಾಂಕ ಮುಂದೂಡಲಾಗಿದೆ. ರಾಜ್ಯದ ಎಲ್ಲಾ ಪತ್ರಕರ್ತರು ನಿಗದಿತ ದಿನಾಂಕದಂದು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಡಿ.ವಿ.ಗುಂಡಪ್ಪ ಹಾಗು ಅನೇಕ ಪತ್ರಕರ್ತರು ಕಟ್ಟಿದ ರಾಜ್ಯ ಪತ್ರಕರ್ತರ ಸಂಘ ಅತ್ಯಂತ ಸದೃಢವಾಗಿ ಕೆಲಸ ಮಾಡುತ್ತಿದೆ. ಪ್ರಸ್ತುತ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಸಂಘಟನಾತ್ಮಕ ಕೆಲಸಗಳ ಮೂಲಕ ಪತ್ರಕರ್ತರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕೋವಿಡ್ ಕಾಲದಲ್ಲಿ ಸಂಕಷ್ಟಕ್ಕೆ ಸಿಲುಕಿದ ಪತ್ರಕರ್ತರಿಗೆ ನೆರವಾಗಿರುವುದನ್ನು ಸ್ಮರಿಸ ಬಹುದೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ವಿವಿಧ ಸಚಿವರು, ಸಂಪನ್ಮೂಲ ವ್ಯಕ್ತಿಗಳು ಸಮ್ಮೇಳನದಲ್ಲಿ ಭಾಗವಹಿಸುವುದರಿಂದ ನಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅವಕಾಶ ದೊರೆಯಲಿದೆ. ಪತ್ರಕರ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ರಾಜ್ಯ ಸಮ್ಮೇಳನ ವೇದಿಕೆಯಾಗಲಿದೆಯೆಂದರು. ಪತ್ರಿಕಾ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಗೌರವಿಸುವುದು ಸೇರಿ ಸರ್ವ ರೀತಿಯಲ್ಲಿ ಸಮ್ಮೇಳನ ಯಶಸ್ವಿಗೊಳಿಸಲು ರಾಜ್ಯ ಸಂಘದ ಜೊತೆಗೆ ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಶ್ರಮಿಸುತ್ತಿದೆಯೆಂದರು.

# ಅಮಾನಿಕೆರೆ ಯೋಜನೆ ರೈತರಿಗೆ ಶೀಘ್ರ ಪರಿಹಾರ

## ಸದನದಲ್ಲಿ ಶಾಸಕ ಬಾಲಕೃಷ್ಣ ಪ್ರಶ್ನೆಗೆ ಸಚಿವ ಡಿ.ಕೆ.ಶಿ. ಉತ್ತರ

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕಿನ ಅಮಾನಿಕೆರೆ ತೋಟಿ ಏತ ನೀರಾವರಿ ಯೋಜನೆ ಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಬಾಕಿ ಇರುವ ಪರಿಹಾರದ ಬಗ್ಗೆ ಪರಿಶೀಲನೆ ಮಾಡಿ ಶೀಘ್ರವೇ ಪರಿಹಾರ ನೀಡಲಾಗುವುದೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದರು.

ವಿಧಾನಸಭೆಯ ಗಮನ ಸೆಳೆವ ಸೂಚನೆ ಮೇಲೆ ನಡೆದ ಚರ್ಚೆ ವೇಳೆ ಶಾಸಕ ಸಿ.ಎನ್. ಬಾಲಕೃಷ್ಣ ಅವರು, ಚನ್ನರಾಯಪಟ್ಟಣ ಅಮನಿ ಕೆರೆ ತೋಟಿ ಏತ ನೀರಾವರಿ ಯೋಜನೆ ಕಾಮಗಾರಿ ಭೂಸ್ವಾಧೀನ ಪರಿಹಾರ ನೀಡದಿರುವುದರಿಂದ ಕಾಮಗಾರಿ ಪ್ರಕ್ರಿಯೆಗೆ ವಿಳಂಬವಾ ಗುತ್ತಿದೆಂದು ತಿಳಿಸಿದರು.

ಅದಕ್ಕೆ ಉತ್ತರ ನೀಡಿದ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು,ಈ ಯೋಜನೆಯಲ್ಲಿ ಪಂಪ್,





ಮೋಟಾರ್ ಎಲ್ಲಾ ವನ್ನು ಅಳವಡಿಸಲಾಗಿದೆ. ತಾಂತ್ರಿಕ ಕಾರಣಗಳಿಂದ ಸ್ವಾಧೀನಗೊಂಡ ಭೂಮಿಗೆ ಪರಿಹಾರ ಬಾಕಿ ಇದೆ ಎಂದು ಕಾಣುತ್ತದೆ. ಈ ಬಗ್ಗೆ ಪರಿ ಶೀಲನೆ ಮಾಡಿಸಿ ಹಣ ನೀಡಲಾಗು ವುದು. ಕೆಲಸ ಮಾಡಲು ಅವಕಾಶ ಕೊಟ್ಟ ರೈತರು ನೀರನ್ನು ಬಳಸಿ ಕೊಳ್ಳಲು ಅವಕಾಶ ಮಾಡಿಕೊಡುತ್ತಿಲ್ಲ. 100 ಮೀಟರ್ ಕೆಲಸ ಬಾಕಿ ಇದೆಯೋ, 500 ಮೀಟರ್ ಕೆಲಸ ಬಾಕಿ ಇದೆಯೋ ಆಕ್ಷೇಪ ವ್ಯಕ್ತಪಡಿ ಸುತ್ತಿರುವ ರೈತರ ಮನವೊಲಿಸಿ ಕೆಲಸ ಪೂರ್ಣಗೊಳಿಸಲು ಅವಕಾಶ ಕೊಡಿಸಿ. ಇಲ್ಲವಾದರೆ ಇದುವರೆಗೂ ಆಗಿರುವ ಕೆಲಸಗಳು ವ್ಯರ್ಥವಾಗುವುದಿಲ್ಲವೇ. ಕಾಮಗಾರಿ ಮಾಡಿ ಭೂಮಿಯಲ್ಲಿ ಪೈಪ್‌ಗಳನ್ನು ಅಳವ ಡಿಸಿದ ಮೇಲೆ ಆ ಭೂಮಾಲೀಕರಿಗೆ ಪರಿಹಾರ ನೀಡಲೇಬೇಕು. ಆ ಕೆಲಸ ನಾವು ಮಾಡುತ್ತೇವೆ. ನೀವು ರೈತರಿಗೆ ಮನವೊಲಿಸಿ ಬಾಕಿ ಇರುವ ಕೆಲಸವನ್ನು ಪೂರ್ಣಗೊಳಿಸಲು ಸಹಕರಿಸಿ, ನೀವೇ ಉದ್ಘಾಟನೆ ಮಾಡಿ. ನಂತರ ನಾನು ಬಂದು ಉದ್ಘಾಟನೆ ಮಾಡುವೆ ಎಂದು ಹೇಳಿದರು.

**ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ | ದತ್ತು ಕಾಯ್ದೆ ಅರಿವು ಕಾರ್ಯಕ್ರಮ**

# ಯಾವ ಮಕ್ಕಳಿಗೂ ಅನಾಥ ಪ್ರಜ್ಞೆ ಕಾಡಬಾರದು

• ಪ್ರಜೋದಯ ವರದಿ

**ಹಾಸನ:** ತಂದೆ-ತಾಯಿ ಇಲ್ಲದ ಜೀವನವನ್ನು ಯಾವ ಮಕ್ಕಳು ನಡೆಸುವುದು ಬೇಡ, ಅನಾಥ ಪ್ರಜ್ಞೆ ಕಾಡದಂತೆ ಮಕ್ಕಳನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ ದತ್ತು ಕಾಯ್ದೆ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳನ್ನು ದತ್ತು ಪಡೆಯುವ ಪ್ರಕ್ರಿಯೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಕ್ಕಳಾಗದ ರಾಜ ಮಹಾರಾಜರು ಸಹ ದತ್ತು ಪಡೆದು ಸಾಮ್ರಾಜ್ಯಗಳನ್ನೇ ಬಿಟ್ಟುಕೊಡುತ್ತಿದ್ದರು. ಆದರೆ



ಬ್ರಿಟಿಷರ ಡಾಲ್ ಹೌಸಿ ಎಂಬ ಅಧಿಕಾರಿ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ಕಾನೂನು ಜಾರಿಗೊಳಿಸಿದ್ದರಿಂದ ದೇಶದಲ್ಲಿ ದಂಗೆಗಳಾದವು. ಝಾನ್ಸಿ ರಾಣಿ ಲಕ್ಷ್ಮಿಬಾಯಿ ಸೇರಿ ಅನೇಕ ಹೋರಾಟಗಾರರು ಬ್ರಿಟಿಷರ ನೀತಿ ವಿರುದ್ಧ ಸಮರ ಸಾರಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಇದು ಪ್ರಮುಖ ಪಾತ್ರ ವಹಿಸಿತು ಎಂದರು.

ದತ್ತು ಪ್ರಕ್ರಿಯೆಗೆ ರಾಮಾಯಣ, ಮಹಾಭಾರತದಲ್ಲೂ ಉಲ್ಲೇಖಗಳಿವೆ. ಸಂತಾನ ಭಾಗ್ಯವಿಲ್ಲದ ಪೋಷಕರು ತಮ್ಮ ವಾರಸುದಾರರನ್ನಾಗಿ ರಕ್ತ ಸಂಬಂಧಿಗಳಲ್ಲದ ಮಕ್ಕಳನ್ನು ಪಡೆಯುವುದು ಪೂರ್ವ ಕಾಲದಿಂದ ಚಾಲ್ತಿಯಲ್ಲಿದೆ. ಪ್ರಸ್ತುತ ದಿನಗಳಲ್ಲಿ ಅದು ಕಾನೂನಿನ ರೂಪ ಪಡೆದಿದೆಯೆಂದರು.

ಕಾರಾ ಎಂಬ ಕೇಂದ್ರ ಸರ್ಕಾರದ ಸಂಸ್ಥೆಯೊಂದು ಮಕ್ಕಳ ದತ್ತು ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ. ಮಕ್ಕಳಾಗದವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಯಮಾನುಸಾರ ಮಕ್ಕಳನ್ನು ದತ್ತು » ನಾಲ್ಕನೇ ಪುಟದಲ್ಲಿ

### ತಾಯಿಯಾಗುವುದೆಂದರೆ ರಂಗ ಪ್ರಯೋಗ

ದತ್ತು ಸ್ವೀಕಾರ ಅರಿವು ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಅವರು ತಾಯಿಯಾಗುವುದೆಂದರೆ ಏಕವ್ಯಕ್ತಿ ರಂಗ ಪ್ರಯೋಗದ ಮೂಲಕ ಗಮನ ಸೆಳೆದರು.

ಸಂತಾನ ಭಾಗ್ಯವಿಲ್ಲದ ತಾಯಿ ಅನುಭವಿಸುವ ನೋವು, ಯಾತನೆ ಹಾಗು ಸಾಮಾಜಿಕ ನಿಂದನೆಯನ್ನು ಪ್ರತಿಬಿಂಬಿಸುವ ನಾಟಕ ಮನೋಜ್ಞವಾಗಿ ಮೂಡಿಬಂತು. ಪ್ರದರ್ಶನದ ಬಳಿಕ ಸಾರ್ವಜನಿಕರು ಅಭಿಪ್ರಾಯ ಹಂಚಿಕೊಂಡರು.




# ಭಾರತವು ರಕ್ಷಣಾ ಕ್ಷೇತ್ರದಲ್ಲಿ ಏಕೆ ಸ್ವಾವಲಂಬಿಯಾಗಬೇಕು?

**» ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್‌ರವರು ಮಾತನಾಡುತ್ತಾ, ಯುದ್ಧದ ಪರಿಣಾಮವು ಎಲ್ಲೆಡೆ ಕಾಣಿಸಿಕೊಳ್ಳುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿನ ಸ್ವಾವಲಂಬನೆಯೇ ಅಡಚಣೆಯನ್ನು ತಪ್ಪಿಸಿಕೊಳ್ಳುವುದಕ್ಕಿರುವ ಏಕೈಕ ಮಾರ್ಗ ಎಂದಿದ್ದಾರೆ. 2014ರವರೆಗೂ ಭಾರತವು ಸುಮಾರು ಶೇ.70ರಷ್ಟು ರಕ್ಷಣಾ ಉಪಕರಣಗಳನ್ನು ವಿದೇಶಗಳಿಂದಲೇ ತರಿಸಿಕೊಳ್ಳುತ್ತಿತ್ತು.**

ಯುದ್ಧಕಾಂಡ ವಿಶ್ವದ ಯಾವುದೇ ವಾಯುರಕ್ಷಣಾ ವ್ಯವಸ್ಥೆಗಳಿಂದಲೂ ತಡೆಯಲಾಗದ ಏಕೈಕ ಕ್ಷಿಪಣಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ನಮ್ಮ ಬ್ರಹ್ಮೋಸ್. ಭಾರತ ಹಾಗೂ ರಷ್ಯಾ ಜಂಟಿಯಾಗಿ ನಿರ್ಮಿಸಿದ ಈ ಕ್ಷಿಪಣಿ, ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ ಪಾಕಿಸ್ತಾನದ ಹಲವು ವಾಯುಸೇನಾ ನೆಲೆಗಳನ್ನು ಪುಡಿಗಟ್ಟಿ, ಶಸ್ತ್ರಾಸ್ತ್ರ ಸಂಗ್ರಹಾಗಾರಕ್ಕೂ ಭಾರಿ ಹಾನಿಯನ್ನುಂಟುಮಾಡಿತು.

ಎರಡನೇ ಮಹಾಯುದ್ಧವು ಮುಗಿದಾಗ, ಹೆಚ್ಚು ಪ್ರಬುದ್ಧಗೊಂಡ ತಲೆಮಾರುಗಳು ಯುದ್ಧದಲ್ಲಿ ತೊಡಗಲಾರವು ಎಂದು ಭಾವಿಸಲಾಗಿತ್ತು. ಆದರೆ ನಂತರವೂ ಯುದ್ಧಸರಣಿ ಮುಂದುವರಿದಿದ್ದನ್ನು ನೋಡಿದಾಗ, ಇತಿಹಾಸದಲ್ಲಿ ಶಾಂತಿ ಎನ್ನುವುದು ಯುದ್ಧಗಳ ನಡುವಿನ ಅಂತರದಲ್ಲಿ ಚಿಮ್ಮುವ ಸೆಲೆ ಎನ್ನುವ ಮಟ್ಟಿಗೆ ಸೀಮಿತವಾಗಿದೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಹೀಗಾಗಿ ಶಾಂತಿಯ ಅವಧಿಯು ಕೇವಲ ಮರುಸಜ್ಜುಗೊಳಿಸುವಿಕೆ ಮತ್ತು ಮುಂದಿನ ಯುದ್ಧಕ್ಕಾಗಿನ ತಯಾರಿ ಅವಧಿಯಂತೆ ಭಾಸವಾಗುತ್ತದೆ!

ನಿಮಗೆ ಶಾಂತಿ ಬೇಕಾದರೆ ಯುದ್ಧಕ್ಕೆ ಸಿದ್ಧರಾಗಿ ಎನ್ನುವ ರೋಮನ್ ಗಾದೆಯು ಜಗತ್ತು ಯುದ್ಧವನ್ನು ಎಷ್ಟು ಅನಿವಾರ್ಯವೆಂದು ಭಾವಿಸಿದೆ ಎಂಬುದನ್ನು ಸೂಚಿಸುತ್ತದೆ. ಹೀಗಾಗಿ, ಬಂದೂಕಿನ ನಳಿಗೆಯ ತುದಿಯಲ್ಲಿ ಗುಬ್ಬಚ್ಚಿಯು ಗೂಡು ಕಟ್ಟಿಕೊಳ್ಳಲಿ ಎಂಬ ಕವಿಯ ಆಶಯವು ಇಂದಿನ ದಿನಗಳಲ್ಲಿ ಕೇವಲ ಸಿನಿಕತನದಂತೆ ಭಾಸವಾಗುತ್ತದೆ.

ಪಾಕಿಸ್ತಾನ, ಚೀನಾಗಳಂಥ ನೆರೆಹೊರೆಯನ್ನು ಹೊಂದಿರುವ ಭಾರತಕ್ಕೆ, ತನ್ನ ಗಡಿಗಳ ರಕ್ಷಣೆಗೆ ಯುದ್ಧಸನ್ನದ್ಧವಾಗಿ ನಿಲ್ಲದೆ ಬೇರೆ ದಾರಿಯಿಲ್ಲ. ರಕ್ಷಣೆಯ ವಿಷಯದಲ್ಲಿ ಪರರನ್ನು ನೆಚ್ಚಿದರೆ ಏನಾಗುತ್ತದೆ ಎಂಬುದಕ್ಕೆ ಪಾಕಿಸ್ತಾನ, ವೆನಿಜುವೆಲಾ, ಇರಾನ್‌ನಂಥ ದೇಶಗಳು ಅಳವಡಿಸಿಕೊಂಡ, ಎಚ್‌ಕ್ಯು-9ಬಿ ಎಂಬ ಚೀನಾ ನಿರ್ಮಿತ ವಾಯುರಕ್ಷಣಾ ವ್ಯವಸ್ಥೆಯ ವೈಫಲ್ಯವೇ ಉದಾಹರಣೆಯಾಗಿದೆ.

ದೇಶದೆಡೆಗೆ ಧಾವಿಸುವ ಕ್ಷಿಪಣಿ, ಡ್ರೋನ್ ಹಾಗೂ ಯುದ್ಧವಿಮಾನಗಳನ್ನು ರಾಡಾರ್‌ಗಳ ಮೂಲಕ ಪತ್ತೆ ಹಚ್ಚಿ, ಮಾರ್ಗಮಧ್ಯೆಯೇ ಅವನ್ನು ನಾಶಪಡಿಸುವಂಥದ್ದು ವಾಯುರಕ್ಷಣಾ ವ್ಯವಸ್ಥೆ. ಕಳೆದ ವರ್ಷದ ಮೇ ತಿಂಗಳಲ್ಲಿ ಪಾಕಿಸ್ತಾನದ ವಿರುದ್ಧ ಭಾರತವು ಆಪರೇಷನ್ ಸಿಂದೂರ ಕಾರ್ಯಾಚರಣೆ ನಡೆಸಿದಾಗ ತನ್ನ ಸಪ್ರೆಶನ್ ಆಫ್ ಎನಿಮಿ ಏರ್ ಡಿಫೆನ್ಸ್ (ಎಸ್‌ಇಎಡಿ) ತಂತ್ರಗಾರಿಕೆಯ ಮೂಲಕ ಚೀನಾನಿರ್ಮಿತ ವಾಯುರಕ್ಷಣಾ ವ್ಯವಸ್ಥೆಯನ್ನು ಭಾರತವು ನಿಸ್ತೇಜಗೊಳಿಸಿತು.

ಹೀಗಾಗಿ, ಭಾರತದ ಬ್ರಹ್ಮೋಸ್ ಕ್ಷಿಪಣಿ, ಡ್ರೋನ್ ಮತ್ತು ಯುದ್ಧ ವಿಮಾನಗಳ ದಾಳಿಗೆ ಪ್ರತ್ಯುತ್ತರಿಸುವಲ್ಲಿ ಪಾಕಿಸ್ತಾನ ವಿಫಲವಾಯಿತು. ಎಚ್‌ಕ್ಯು-9ಬಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಇರಾನ್ ಕೂಡ, ಇಸ್ರೇಲ್-ಅಮೆರಿಕ ದೇಶಗಳ ಜಂಟಿದಾಳಿಯನ್ನು ತಡೆಯುವಲ್ಲಿ ವಿಫಲವಾಗಿದೆ.

ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ಭಾರತದ ರಕ್ಷಣಾ ಸಚಿವ ರಾಜನಾಥ ಸಿಂಗ್‌ರವರು ಮಾತನಾಡುತ್ತಾ, ಯುದ್ಧದ ಪರಿಣಾಮವು ಎಲ್ಲೆಡೆ ಕಾಣಿಸಿಕೊಳ್ಳುತ್ತಿದೆ. ರಕ್ಷಣಾ ಕ್ಷೇತ್ರದಲ್ಲಿನ ಸ್ವಾವಲಂಬನೆಯೇ ಅಡಚಣೆಯನ್ನು ತಪ್ಪಿಸಿಕೊಳ್ಳುವುದಕ್ಕಿರುವ ಏಕೈಕ ಮಾರ್ಗ ಎಂದಿದ್ದಾರೆ.

2014ರವರೆಗೂ ಭಾರತವು ಸುಮಾರು ಶೇ.70ರಷ್ಟು ರಕ್ಷಣಾ ಉಪಕರಣಗಳನ್ನು ವಿದೇಶಗಳಿಂದಲೇ ತರಿಸಿಕೊಳ್ಳುತ್ತಿತ್ತು. ಆದರೆ, ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ, ಸ್ಟಾರ್ಟ್‌ಅಪ್ ಇಂಡಿಯಾ ಮುಂತಾದ ಸಕಾರಾತ್ಮಕ ಉಪಕ್ರಮಗಳ ಪರಿಣಾಮವಾಗಿ ಇದೀಗ ರಕ್ಷಣಾ ಉಪಕರಣಗಳಿಗಾಗಿನ ವಿದೇಶಿ ಅವಲಂಬನೆ ಶೇ.30ರ ಮಟ್ಟಕ್ಕೆ ಇಳಿದಿದೆ.

ದೇಶದ ಶಸ್ತ್ರಾಸ್ತ್ರಗಳ ಪೈಕಿ ಗಣನೀಯ ಭಾಗವು ಮೇಕ್ ಇನ್ ಇಂಡಿಯಾ ಯೋಜನೆಯಡಿ ಭಾರತದಲ್ಲೇ ರೂಪುಗೊಂಡಿದ್ದು, 16000 ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ಹಾಗೂ 1000 ನವೋದ್ಯಮಗಳು ಈ ನಿಟ್ಟಿನಲ್ಲಿ ಕೈಜೋಡಿಸಿವೆ. ಕಳೆದ ವರ್ಷ 1.5 ಲಕ್ಷ ಕೋಟಿ ರು. ಮೌಲ್ಯದ ರಕ್ಷಣೋಪಕರಣಗಳನ್ನು ಭಾರತದಲ್ಲೇ ಉತ್ಪಾದಿಸಲಾಗಿದೆ, 24000 ಕೋಟಿ ರುಪಾಯಿ ಮೌಲ್ಯದ ಉಪಕರಣಗಳನ್ನು ರಫ್ತು ಮಾಡಲಾಗಿದೆ.

2030ರ ವರ್ಷದೊಳಗೆ ವಾರ್ಷಿಕ 3 ಲಕ್ಷ ಕೋಟಿ ರು. ಮೌಲ್ಯದ ರಕ್ಷಣೋಪಕರಣಗಳನ್ನು ಉತ್ಪಾದಿಸುವ ಗುರಿಯನ್ನು ಸರಕಾರ ಇಟ್ಟುಕೊಂಡಿದೆ. ವಿಶ್ವದ ಯಾವುದೇ ವಾಯುರಕ್ಷಣಾ ವ್ಯವಸ್ಥೆಗಳಿಂದಲೂ ತಡೆಯಲಾಗದ ಏಕೈಕ ಕ್ಷಿಪಣಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ನಮ್ಮ ಬ್ರಹ್ಮೋಸ್.

ಭಾರತ ಹಾಗೂ ರಷ್ಯಾ ಜಂಟಿಯಾಗಿ ನಿರ್ಮಿಸಿದ ಈ ಕ್ಷಿಪಣಿ, ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ ಪಾಕಿಸ್ತಾನದ ಹಲವು ವಾಯುಸೇನಾ ನೆಲೆಗಳನ್ನು ಪುಡಿಗಟ್ಟಿ, ಶಸ್ತ್ರಾಸ್ತ್ರ ಸಂಗ್ರಹಾಗಾರಕ್ಕೂ ಭಾರಿ ಹಾನಿಯನ್ನುಂಟುಮಾಡಿತು. ಈ ಕಾರ್ಯಾಚರಣೆಯ ವೇಳೆ ನಮ್ಮ ವಾಯುರಕ್ಷಣಾ ವ್ಯವಸ್ಥೆ ಎಷ್ಟು ಕರಾರುವಾಕ್ಕಾಗಿತ್ತೆಂದರೆ, ಪಾಕಿಸ್ತಾನವು ಭಾರತದ ಮೇಲೆ ಪ್ರಯೋಗಿಸಿದ್ದ ಫತಾಹ್-2ರಂಥ ಕ್ಷಿಪಣಿಗಳನ್ನು ಹಾಗೂ 600ಕ್ಕೂ ಹೆಚ್ಚು ಡ್ರೋನ್‌ಗಳನ್ನು ಮಾರ್ಗಮಧ್ಯದಲ್ಲೇ ತಡೆಹಿಡಿದು ನಾಶಮಾಡಲಾಯಿತು.

ಪಾಕಿಸ್ತಾನದ ಕ್ಷಿಪಣಿ ಅಥವಾ ಡ್ರೋನ್‌ಗಳು ತಮ್ಮ ಗುರಿಯನ್ನು ತಲುಪಿದ್ದು ವಿರಳ ವೆನ್ನಬೇಕು: ಏಕೆಂದರೆ, ಎಸ್-400 ಎಂದೇ ಕರೆಯಲ್ಪಡುವ ರಷ್ಯಾ ನಿರ್ಮಿತ ವಾಯು ರಕ್ಷಣಾ ವ್ಯವಸ್ಥೆಯ ಜತೆಗೆ ಸ್ವದೇಶಿ ನಿರ್ಮಿತ ಆಕಾಶ್ ವಾಯುರಕ್ಷಣಾ ವ್ಯವಸ್ಥೆಯೂ ಸೇರಿಕೊಂಡು ಅವನ್ನು ಹೊಡೆದುರುಳಿಸಿದವು.

ಇದೀಗ ರಷ್ಯಾದ ಎಸ್-500ಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲ ಪ್ರಾಜೆಕ್ಟ್ ಕುಶ ಎಂಬ ವಾಯುರಕ್ಷಣಾ ವ್ಯವಸ್ಥೆಯು ಡಿಆರ್‌ಡಿಒ ವತಿಯಿಂದಲೇ ದೇಶೀಯವಾಗಿಯೇ ನಿರ್ಮಾಣವಾಗುತ್ತಿದ್ದು, 2030ರ ಒಳಗಾಗಿ ಅದು ದೇಶಾದ್ಯಂತ ಅಳವಡಿಸಲ್ಪಡಲಿದೆ.

2001ರಲ್ಲಿ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದ ಅವಧಿಯಲ್ಲಿ, ಸ್ವದೇಶಿ ನಿರ್ಮಿತ ತೇಜಸ್ ಲಘು ಯುದ್ಧವಿಮಾನವು ಮೊದಲ ಹಾರಾಟವನ್ನು ನಡೆಸಿದ್ದರೂ, 2004ರಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಸರಕಾರವು ಅದನ್ನು ವಾಯುಪಡೆಗೆ ಸೇರಿಸಲು ಯಾವುದೇ ಆಸಕ್ತಿಯನ್ನು ತೋರಲಿಲ್ಲ.

ಆದರೆ, 2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರವು ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿತು. ತೇಜಸ್ ಅನ್ನು ಭಾರತವು ತಯಾರಿಸುತ್ತಿದ್ದರೂ ಅದರ ಎಂಜಿನ್‌ಗಾಗಿ ಅಮೆರಿಕವನ್ನು ನೆಚ್ಚಬೇಕಾದ ಪರಿಸ್ಥಿತಿ ಎದುರಾಯಿತು. ಏಕೆಂದರೆ, ಈ ವಿಮಾನಕ್ಕೆಂದು ದೇಶೀಯವಾಗಿ ತಯಾರಿಸಲಾಗಿದ್ದ ಕಾವೇರಿ ಎಂಜಿನ್, ಅವಶ್ಯಕತೆಗೆ ತಕ್ಕಂಥ ಶಕ್ತಿಯನ್ನು ಕೊಡಲು ವಿಫಲವಾಯಿತು.

ಅಂದರೆ, 83ರಿಂದ 85 ಕಿಲೋ ನ್ಯೂಟನ್‌ನಷ್ಟು ಥ್ರಸ್ಟ್ (ಒತ್ತಡ) ಕೊಡುವ ಎಂಜಿನ್ ಬೇಕಾಗಿತ್ತು, ಆದರೆ 42ರಷ್ಟು ಥ್ರಸ್ಟ್ ಅನ್ನು ಮಾತ್ರವೇ ಕೊಡಲು ಕಾವೇರಿ ಎಂಜಿನ್‌ಗೆ ಸಾಧ್ಯವಾಗಿತ್ತು. ಹೀಗಾಗಿ ಅಮೆರಿಕದ ಜನರಲ್ ಇಲೆಕ್ಟ್ರಿಕ್ ಸಂಸ್ಥೆ ರೂಪಿಸಿದ ಎಫ್-404 ಎಂಜಿನ್ ಅನ್ನು ತೇಜಸ್‌ಗೆ ಬಳಸಲಾಯಿತು.

ಇದೀಗ ಡಿಆರ್‌ಡಿಒ ಸಂಸ್ಥೆಯ ಅಂಗವಾದ ಜಿಟಿಆರ್‌ಇನ ಸತತ ಪ್ರಯತ್ನದ ಫಲವಾಗಿ 81-83 ಕಿಲೋನ್ಯೂಟನ್‌ನಷ್ಟು ಒತ್ತಡವನ್ನು ಸಾಧಿಸುವಲ್ಲಿ ಕಾವೇರಿ ಎಂಜಿನ್ ಯಶಸ್ವಿಯಾಗಿದೆ ಮತ್ತು ಯುದ್ಧವಿಮಾನಗಳ ಎಂಜಿನ್ ತಯಾರಿಕೆಯಲ್ಲಿ ಸ್ವಾವಲಂಬಿಯಾಗುವೆಡೆಗೆ ಇದು ಮಹತ್ವದ ಹೆಜ್ಜೆಯಾಗಿದೆ.

ಅಡ್ವಾನ್ಸ್‌ಡ್ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್ (ಆಮ್ಕಾ) ಹೆಸರಿನ, 120 ರಿಂದ 140 ಕಿಲೋನ್ಯೂಟನ್ ಒತ್ತಡವಿರುವ ಯುದ್ಧವಿಮಾನವನ್ನು ಭಾರತವು ನಿರ್ಮಿಸುತ್ತಿದ್ದು, ಇದರ ಎಂಜಿನ್ ಅನ್ನು ಫ್ರಾನ್ಸಿನ ಸಾಫ್ರಾನ್ ಹಾಗೂ ಭಾರತದ ಡಿಆರ್‌ಡಿಒ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸಲಿವೆ.

ಒಪ್ಪಂದದ ಅನುಸಾರ ಸಾಫ್ರಾನ್ ಸಂಸ್ಥೆಯು ಸಂಪೂರ್ಣ ತಂತ್ರಜ್ಞಾನವನ್ನು ಭಾರತಕ್ಕೆ ಹಸ್ತಾಂತರಿಸಲಿದೆ. ಆಮ್ಕಾ ಯುದ್ಧವಿಮಾನದ ಐದು ಮಾದರಿಗಳನ್ನು 2027ರ ಒಳಗೆ ನಿರ್ಮಿಸಲಾಗುವುದು ಮತ್ತು 2028ರಲ್ಲಿ ಅವುಗಳ ಪರೀಕ್ಷೆ ನಡೆಸಲಾಗುವುದು, 2035ರಲ್ಲಿ ಆಮ್ಕಾ ಎಂ.ಕೆ.-2 ಯುದ್ಧ ವಿಮಾನದ ವಿವಿಧ ಸರಣಿಗಳನ್ನು ಸೇನೆಗೆ ಸೇರ್ಪಡೆಗೊಳಿಸಲಾಗುವುದು. ಈ ಮಹತ್ತರ ಉಪಕ್ರಮದಿಂದಾಗಿ ಯುದ್ಧ ವಿಮಾನಗಳಿಗಾಗಿ ವಿದೇಶಗಳನ್ನು ನೆಚ್ಚುವುದು ತಗ್ಗಲಿದೆ, ದೇಶವು ಸ್ವಾವಲಂಬಿಯಾಗಲಿದೆ.

ಭಾರತವು ತನ್ನ ಉಪಯೋಗಕ್ಕಾಗಿ ರಷ್ಯಾದ ಹಳೆಯ ಯುದ್ಧವಾಹಕ ನೌಕೆಗಳನ್ನು ಖರೀದಿಸುತ್ತಿತ್ತು, ಅದೇ ರೀತಿಯಲ್ಲಿ ಯುದ್ಧ ನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳ ಖರೀದಿಯೂ ನಡೆಯುತ್ತಿತ್ತು. 262 ಮೀಟರ್ ಉದ್ದದ, ಅಣುಶಕ್ತಿಯಿಂದ ಚಲಿಸುವ ಐಎನ್‌ಎಸ್ ವಿಕ್ರಾಂತ್ ಎಂಬ ವಿಮಾನವಾಹಕ ನೌಕೆಯನ್ನು 2022ರಲ್ಲಿ ನೌಕಾಪಡೆಗೆ ಹಸ್ತಾಂತರಿಸಲಾಯಿತು ಹಾಗೂ ಇದೀಗ ಇಂಥ 2ನೇ ನೌಕೆಯ ನಿರ್ಮಾಣಕ್ಕೆ ಅನುಮೋದಿಸಲಾಗಿದೆ.

ಸ್ವದೇಶಿ ನಿರ್ಮಿತ 3 ಯುದ್ಧನೌಕೆಗಳನ್ನು ಕಳೆದ ವರ್ಷ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಗಿದ್ದು, ಐಎನ್‌ಎಸ್ ಅರಿಹಂತ್, ಐಎನ್‌ಎಸ್ ಅರಿಘಾತ್ ಹೆಸರಿನ ಪರಮಾಣು ಇಂಧನ ಚಾಲಿತ ಜಲಾಂತರ್ಗಾಮಿಗಳು ಈಗಾಗಲೇ ನಮ್ಮ ನೌಕಾಪಡೆಯನ್ನು ಸೇರಿವೆ ಹಾಗೂ ಐಎನ್‌ಎಸ್ ಅರಿಂಧಮ್ ನಿರ್ಮಾಣವಾಗುತ್ತಿದೆ. ಮಿಕ್ಕಂತೆ, 74ರಷ್ಟು ಯುದ್ಧ ನೌಕೆಗಳು ಮತ್ತು ಜಲಾಂತರ್ಗಾಮಿಗಳ ನಿರ್ಮಾಣಕ್ಕೆ ಸರಕಾರ ಅನುಮತಿಸಿದೆ. 2035ರ ವೇಳೆಗೆ ಭಾರತವು 200ರಷ್ಟು ಸಮರನೌಕೆ ಮತ್ತು ಜಲಾಂತರ್ಗಾಮಿಗಳನ್ನು ಹೊಂದಲಿದೆ.




ಕ್ಷಿಪಣಿ ಮತ್ತು ಡ್ರೋನ್ ತಂತ್ರಜ್ಞಾನದಲ್ಲಿ ಭಾರತವು ಪ್ರಾವೀಣ್ಯವನ್ನು ಗಳಿಸಿಕೊಂಡಿದೆ. ಅಗ್ನಿ ಸರಣಿಯ ಖಂಡಾಂತರ ಕ್ಷಿಪಣಿಗಳಿಗೆ 8000 ಕಿ.ಮೀ. ದೂರ ಕ್ರಮಿಸುವ ಸಾಮರ್ಥ್ಯವಿದೆ. ಕೆ ಸರಣಿಯ ಕ್ಷಿಪಣಿಗಳಿಗೆ 5000 ಕಿ.ಮೀ. ದೂರದ ಗುರಿಯನ್ನು ಹೊಡೆಯುವ ಸಾಮರ್ಥ್ಯವಿದ್ದರೆ, ಜಗತ್ತಿನ ಅತಿವೇಗದ ಸೂಪರ್ ಸಾನಿಕ್ ಕ್ಷಿಪಣಿ ಎಂಬ ಹೆಗ್ಗಳಿಕೆಗೆ ಬ್ರಹ್ಮೋಸ್ ಪಾತ್ರವಾಗಿದೆ.

ಪೃಥ್ವಿ, ಶೌರ್ಯ, ಅಸ್ತ್ರ, ಆಕಾಶ್, ನಿರ್ಭಯ್ ಮುಂತಾದ ವೈವಿಧ್ಯಮಯ ಸಾಮರ್ಥ್ಯದ ಕ್ಷಿಪಣಿಗಳು ಭಾರತದ ಬತ್ತಳಿಕೆಯಲ್ಲಿವೆ. ನಿಖರ ಗುರಿ ಸಾಧಿಸಬಲ್ಲ ಘಾತಕ್, ಇತರ ಡ್ರೋನ್‌ಗಳನ್ನು ಹೊಡೆದುರುಳಿಸಬಲ್ಲ ನಾಗಾಸ-1, ಒಂದು ಸಾವಿರ ಕಿ.ಮೀ. ಕ್ರಮಿಸಿ ಶತ್ರುಗಳ ನೆಲೆಯನ್ನು ನಾಶ ಮಾಡಬಲ್ಲ ಶೇಷನಾಗ್ ಮುಂತಾದವು ನಮ್ಮ ಸೇನೆಯಲ್ಲಿರುವ ಡ್ರೋನ್‌ಗಳು.

ಒಟ್ಟಾರೆ ಹೇಳುವುದಾದರೆ, ಪೂರ್ಣಪ್ರಮಾಣದ ಯುದ್ಧವಾದರೆ ಕೇವಲ 10 ದಿನಗಳಿಗೆ ಸಾಕಾಗುವಷ್ಟು ಶಸ್ತ್ರಾಸ್ತ್ರ ಸಂಗ್ರಹ ದೇಶದಲ್ಲಿದೆ ಎನ್ನುವ ಪರಿಸ್ಥಿತಿ 2013ರಲ್ಲಿತ್ತು. ಆದರೆ ಈಗ 40 ದಿನಗಳ ಪೂರ್ಣ ಪ್ರಮಾಣದ ಯುದ್ಧವನ್ನು ಎದುರಿಸುವಷ್ಟು ಶಸ್ತ್ರಾಸ್ತ್ರ ಸಂಗ್ರಹ ದೇಶದಲ್ಲಿದೆ.

ದೇಶದ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳಲು ಮತ್ತು ಪ್ರಜೆಗಳನ್ನು ರಕ್ಷಿಸಲು ಪ್ರಬಲ ಮಿಲಿಟರಿ ವ್ಯವಸ್ಥೆ ಬೇಕೇ ಬೇಕು. ಇದು ವ್ಯಾಪಾರ ಮಾರ್ಗಗಳನ್ನು ರಕ್ಷಿಸುತ್ತದೆ, ದೇಶದ ಸಂಪನ್ಮೂಲಗಳನ್ನು ಕಾಯುತ್ತದೆ ಹಾಗೂ ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಸ್ಥಿರತೆಯನ್ನು ಒದಗಿಸುತ್ತದೆ. ಭೂರಾಜಕೀಯವೇ ಪಾರಮ್ಯವನ್ನು ದಕ್ಕಿಸಿಕೊಂಡಿರುವ ಈ ಕಾಲ ಘಟ್ಟದಲ್ಲಿ ರಾಜತಾಂತ್ರಿಕತೆ ಮತ್ತು ವ್ಯಾಪಾರ ನೀತಿಯನ್ನು ಸಮರ್ಥಿಸಿಕೊಳ್ಳಲು, ಗಟ್ಟಿಯಾಗಿ ಕಾಯ್ದುಕೊಳ್ಳಲು ದೇಶವೊಂದರ ಮಿಲಿಟರಿ ಶಕ್ತಿಯು ನಿರ್ಣಾಯಕ ಅಂಶವಾಗಿರುತ್ತದೆ.


ಹೀಗಾಗಿ ಪ್ರಬಲ ಮಿಲಿಟರಿ ಶಕ್ತಿಯಾಗಿ ಗುರುತಿಸಿಕೊಳ್ಳುವುದು ಭಾರತಕ್ಕೆ ಅನಿವಾರ್ಯವಾಗಿದೆ. ರಕ್ಷಣಾತ್ಮಕವಾಗಿ ಸ್ವಾವಲಂಬಿಯಾದರೆ ಮಾತ್ರವೇ ಇದು ಸಾಧ್ಯ. ಈ ನಿಟ್ಟಿನಲ್ಲಿ ಭಾರತವು ಸರಿಯಾದ ದಿಕ್ಕಿನಲ್ಲೇ ಸಾಗುತ್ತಿದೆ ಎಂದು ಘಂಟಾಘೋಷವಾಗಿ ಹೇಳಬಹುದು.

**- ಗಣೇಶ್ ಭಟ್, ವಾರಣಾಸಿ,** (ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)




# ಮೀನಿನ ಕೊಬ್ಬು ಹೃದಯಕ್ಕೆ ಸಂಜೀವಿನಿ

**ರಕ್ತದಲ್ಲಿ ಹೆಚ್ಚಿದ ಕೊಬ್ಬು, ಕೊಲೆಸ್ಟರಾಲ್, ಜೀವಕೋಶಗಳು ಮತ್ತು ಇತರೇ ತೇಲುಕಣಗಳು ಹೆಪ್ಪುಗಟ್ಟಿ ರಕ್ತನಾಳಗಳು ಕ್ರಮೇಣ ಮುಚ್ಚಿ ಹೋಗಿ ರಕ್ತ ಪರಿಚಲನೆಗೆ ಅಡ್ಡಿಯಾಗುವುದರಿಂದ ಈ ರೋಗ ಉಂಟಾಗುತ್ತದೆ. ರಕ್ತನಾಳಗಳು ಸಂಪೂರ್ಣ ಮುಚ್ಚಲ್ಪಟ್ಟಾಗ ರಕ್ತ ಪರಿಚಲನೆ ನಿಂತು ಹೃದಯ ಸ್ಥಂಭನವಾಗುತ್ತದೆ. ಆದ್ದರಿಂದ, ಸಂತ್ರಪ್ತ ಮೇಧೋ ಆಮ್ಲಗಳು ಅಧಿಕವಿರುವ ಆಹಾರಗಳ ಬಳಕೆಯ ಮೇಲೆ (ಅಧಿಕ ಕೊಬ್ಬಿನಿಂದ ಕೂಡಿದ ಮಾಂಸಾಹಾರಗಳು, ಡಾಲ್ಡ, ತುಪ್ಪ ಮುಂತಾದವು) ನಿಯಂತ್ರಣವಿರಬೇಕು. ಸಮುದ್ರ ಮೂಲದ ಕೊಬ್ಬುಯುಕ್ತ ಮೀನುಗಳಲ್ಲಿ (ಮ್ಯಾಕರಲ್, ಹರ್ರಿಂಗೆ, ಸಾರ್ಡಿನ್ ಮುಂತಾದವು) ಒಮೇಗ-3 ಎಂಬ ವಿಶಿಷ್ಟ ವರ್ಗದ ಕೊಬ್ಬು (ಲಿನೊಲಿನಿಕ್ ಗುಂಪಿಗೆ ಸೇರಿದ) ಇರುವುದರಿಂದ ಅದರ ನಿತ್ಯ ಬಳಕೆಯಿಂದ ಹೃದ್ರೋಗಕ್ಕೆ ಸಂಬಂಧಿಸಿದ ಮತ್ತು ರಕ್ತದಲ್ಲಿ ಕರಗಿರುವ ಕೊಲೆಸ್ಟರಾಲ್ ಮತ್ತು ಟ್ರೆಗ್ಲಿಸರೈಡ್ಸ್ ಎಂಬ ಕೊಬ್ಬುಗಳ ಮಟ್ಟವನ್ನು ತಗ್ಗಿಸಿ ತನ್ಮೂಲಕ ಹೃದ್ರೋಗ ತಡೆಗಟ್ಟುವ ಸಾಮರ್ಥ್ಯ ಇದಕ್ಕಿದೆ.**



ಇತ್ತೀಚಿನ ವರ್ಷಗಳಲ್ಲಿ ಜನರು ದೇಹಾರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದಾರೆ. ತಮ್ಮ ದೇಹದಲ್ಲಿ ಅನಾವಶ್ಯಕವಾಗಿ ಕೊಬ್ಬು ಶೇಖರಣೆಗೊಳ್ಳದಂತೆ ಮುಂಜಾಗ್ರತೆ ವಹಿಸುತ್ತಾರೆ. ಏಕೆಂದರೆ ಕೊಬ್ಬಿನ ಅಧಿಕ ಸೇವನೆಯಿಂದ ದೇಹ ಸ್ಥೂಲವಾಗಿ ಬೆಳೆದು ಹೃದಯದ ಆರೋಗ್ಯಕ್ಕೆ ಧಕ್ಕೆ ಒಡ್ಡುತ್ತದೆ ಎಂಬುದು ಎಲ್ಲರಲ್ಲೂ ಮನವರಿಕೆಯಾಗಿದೆ. ಇತರೆ ಪ್ರಾಣಿ ಮೂಲ ಆಹಾರಗಳಿಗೆ ಹೋಲಿಸಿದರೆ, ಮೀನಿನಲ್ಲಿ ಕೊಬ್ಬಿನ ಅಂಶ ಕಡಿಮೆ ಇದೆ. (ಸಾಮಾನ್ಯವಾಗಿ ಶೇ. 5ಕ್ಕಿಂತ ಕಡಿಮೆ) ಆದರೆ ಬೂತಾಯಿ (ಸಾರ್ಡಿನ್)ಯಂತಹ ಕೆಲವು ಮೀನುಗಳಲ್ಲಿ ಶೇ 18-20 ರವರೆಗೂ ಕೊಬ್ಬಿನ ಅಂಶ ಇರುತ್ತದೆ. ಮೀನಿನ ಕೊಬ್ಬಿನಲ್ಲಿ ಆರೋಗ್ಯಕ್ಕೆ ಹೆಚ್ಚು ಪ್ರಯೋಜನಕಾರಿಯಾದ ಅಸಂತೃಪ್ತ ಮೇಧೋ ಆಮ್ಲಗಳ ಪ್ರಮಾಣ ಅಧಿಕವಾಗಿದ್ದು (ಶೇ. 70), ಸಂತೃಪ್ತ ಮೇಧೋ ಆಮ್ಲಗಳ ಪ್ರಮಾಣ ಕಡಿಮೆ ಇರುತ್ತದೆ.

ಸಂತೃಪ್ತ ಮೇದೋ ಆಮ್ಲಗಳ ಅಧಿಕ ಸೇವನೆ ಹೃದಯದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಏಕೆಂದರೆ, ಅಂಥಾ ಆಮ್ಲಗಳ ಅಧಿಕ ಸೇವನೆಯಿಂದ ರಕ್ತದಲ್ಲಿ ಕೊಲೆಸ್ಟರಾಲ್ ಪ್ರಮಾಣ ಜಾಸ್ತಿಯಾಗಿ ಅಥೆರೋ ಸಿಕ್ಲೋರೋಸಿಸ್ ಎಂಬ ಹೃದ್ರೋಗ ಉಂಟಾಗುತ್ತದೆ. ರಕ್ತದಲ್ಲಿ ಹೆಚ್ಚಿದ ಕೊಬ್ಬು, ಕೊಲೆಸ್ಟರಾಲ್, ಜೀವಕೋಶಗಳು ಮತ್ತು ಇತರೇ ತೇಲುಕಣಗಳು ಹೆಪ್ಪುಗಟ್ಟಿ ರಕ್ತನಾಳಗಳು ಕ್ರಮೇಣ ಮುಚ್ಚಿ ಹೋಗಿ ರಕ್ತ ಪರಿಚಲನೆಗೆ ಅಡ್ಡಿಯಾಗುವುದರಿಂದ ಈ ರೋಗ ಉಂಟಾಗುತ್ತದೆ. ರಕ್ತನಾಳಗಳು ಸಂಪೂರ್ಣ ಮುಚ್ಚಲ್ಪಟ್ಟಾಗ ರಕ್ತ ಪರಿಚಲನೆ ನಿಂತು ಹೃದಯ ಸ್ಥಂಭನವಾಗುತ್ತದೆ. ಆದ್ದರಿಂದ, ಸಂತ್ರಪ್ತ ಮೇಧೋ ಆಮ್ಲಗಳು ಅಧಿಕವಿರುವ ಆಹಾರಗಳ ಬಳಕೆಯ ಮೇಲೆ (ಅಧಿಕ ಕೊಬ್ಬಿನಿಂದ ಕೂಡಿದ ಮಾಂಸಾಹಾರಗಳು, ಡಾಲ್ಡ, ತುಪ್ಪ ಮುಂತಾದವು) ನಿಯಂತ್ರಣವಿರಬೇಕು.

ಸಮುದ್ರ ಮೂಲದ ಕೊಬ್ಬುಯುಕ್ತ ಮೀನುಗಳಲ್ಲಿ (ಮ್ಯಾಕರಲ್, ಹರ್ರಿಂಗೆ, ಸಾರ್ಡಿನ್ ಮುಂತಾದವು) ಒಮೇಗ-3 ಎಂಬ ವಿಶಿಷ್ಟ ವರ್ಗದ ಕೊಬ್ಬು (ಲಿನೊಲಿನಿಕ್ ಗುಂಪಿಗೆ ಸೇರಿದ) ಇರುವುದರಿಂದ ಅದರ ನಿತ್ಯ ಬಳಕೆಯಿಂದ ಹೃದ್ರೋಗಕ್ಕೆ ಸಂಬಂಧಿಸಿದ ಮತ್ತು ರಕ್ತದಲ್ಲಿ ಕರಗಿರುವ ಕೊಲೆಸ್ಟರಾಲ್ ಮತ್ತು ಟ್ರೆಗ್ಲಿಸರೈಡ್ಸ್ ಎಂಬ ಕೊಬ್ಬುಗಳ ಮಟ್ಟವನ್ನು ತಗ್ಗಿಸಿ ತನ್ಮೂಲಕ ಹೃದ್ರೋಗ ತಡೆಗಟ್ಟುವ ಸಾಮರ್ಥ್ಯ ಅದಕ್ಕಿದೆ ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ಈ ಸಂಬಂಧ ಸಾಕಷ್ಟು ವಾದ ವಿವಾದಗಳು ಸೃಷ್ಟಿಯಾಗಿವೆಯಾದರೂ, ವರ್ಷದ ಹಿಂದೆ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ನಡೆಸಿದ ಒಂದು ಸಂಶೋಧನೆಯ ಪ್ರಕಾರ, ವಾರಕ್ಕೊಮ್ಮೆ ಅಧಿಕ ಕೊಬ್ಬಿನಿಂದ ಕೂಡಿದ ಮೀನುಗಳ ಆಹಾರ ಸೇವನೆಯಿಂದ ಹೃದಯಾಘಾತವನ್ನು ಶೇ. 50ರಷ್ಟು ಕಮ್ಮಿಗೊಳಿಸಲು ಸಾಧ್ಯ ಎಂದು ತಿಳಿದು ಬಂದಿದೆ. ಇದಕ್ಕೆ ಮೀನಿನ ಎಣ್ಣೆಯಲ್ಲಿರುವ ಒಮೇಗಾ-3 ಮೇಧೋ ಆಮ್ಲಗಳು ಕಾರಣವೆಂತಲೂ ಮತ್ತು ತಿಂಗಳೊಂದರಲ್ಲಿ 5.5ಗ್ರಾಂ. ಒಮೇಗಾ 3 ಎಣ್ಣೆ ಸೇವನೆಯಿಂದ ಹೃದ್ರೋಗ ಸಮಸ್ಯೆ ನಿವಾರಿಸಲು ಸಾಧ್ಯ ಎಂದೂ ಆ ಸಂಶೋಧನಾ ವರದಿ ತಿಳಿಸಿದೆ. ಆಸ್ಟ್ರೇಲಿಯಾದ ಹೃದಯ ಫೌಂಡೇಶನ್ ಪ್ರೋಗ್ರಾಂ ಮ್ಯಾನೇಜರ್ ರ‍್ಸೆ ಟ್ಯಾಗ್ರಂಡಿ ಅವರು ಒಮೇಗಾ-3 ಕೊಬ್ಬು, ಹೃದ್ರೋಗವನ್ನು ನಿವಾರಿಸುತ್ತದೆ ಮತ್ತು ಮಕ್ಕಳಲ್ಲಿ ನರಮಂಡಲದ ಬೆಳವಣಿಗೆಯನ್ನೂ ಚುರುಕುಗೊಳಿಸುತ್ತದೆ ಎಂದು ತಿಳಿಸಿದ್ದಾರೆ. ಬುಲ್ಲಿಯಾ, ರೆಡ್ಡಿ ಮತ್ತಿತರರು (1989) ನಮ್ಮ ದೇಶದಲ್ಲಿ ನಡೆಸಿದ ಸಂಶೋಧನೆಯಿಂದ ಮೀನನ್ನು ಹೆಚ್ಚಾಗಿ ಆಹಾರದಲ್ಲಿ ಉಪಯೋಗಿಸುವ ಜನಸಮುದಾಯದವರ (ಮೀನನ್ನು ಬಳಸದೇ ಇರುವ ಜನ ಸಮುದಾಯಕ್ಕೆ ಹೋಲಿಸಿದಾಗ) ರಕ್ತದಲ್ಲಿ ಒಟ್ಟು ಕೊಲೆಸ್ಟರಾಲ್, ಟ್ರೆಂಗ್ಲಿಸರೈಡ್ಸ್ ಮತ್ತು ರಕ್ತದ ಒತ್ತಡ ಕಡಿಮೆ ಮಟ್ಟದಲ್ಲಿರುವುದು ಕಂಡು ಬಂದಿದೆ. ಅಲ್ಲದೆ, 100ಗ್ರಾಂ ತೂಕದ ಸೀಯರ್ ಫಿಶ್ (ಅಂಜಲ್), ಹಿಲ್ಸ, ಕಪ್ಪು ಪಾಂಪ್ಲೆಟ್ ಮೀನು ಮಾಂಸವು ಸಾಕಷ್ಟು ಒಮೇಗಾ-3 ಕೊಬ್ಬನ್ನು ಪೂರೈಸುವುದೆಂದೂ ತಿಳಿದು ಬಂದಿದೆ. ಅತೀ ಹೆಚ್ಚು ಪ್ರಮಾಣದ ಒಮೇಗಾ-3 ಕೊಬ್ಬು, ಅಂದರೆ 3ಗ್ರಾಂ/100ಗ್ರಾ ಹಿಲ್ಸಾದಲ್ಲಿ 2.33ಗ್ರಾಂ/100ಗ್ರಾ, ಕಪ್ಪು ಪಾಂಪ್ಲೆಟ್ 2.02 ಗ್ರಾಂ/100ಗ್ರಾ, ಮಲ್ಲೆಟ್ (ಮಾಲ) 1.34 ಗ್ರಾಂ/100ಗ್ರಾ ಇರುವುದಾಗಿಯೂ ಸಂಶೋಧನಾ ವರದಿ ಸೂಚಿಸುತ್ತದೆ) ಅಲ್ಲದೆ, ಒಮೇಗಾ-3 ಕೊಬ್ಬು ಎಕ್ಸಿಮಾ ಮತ್ತು ಸೋರಿಯಾಸಿಸ್ ಎಂಬ ಚರ್ಮದ ರೋಗಗಳನ್ನೂ ಸಂದಿವಾತದ ತೊಂದರೆಗಳನ್ನೂ ನಿವಾರಿಸುವುದೆಂದೂ ತಿಳಿದುಬಂದಿದೆ.

ಸಾಮಾನ್ಯವಾಗಿ, ಕೊಲೆಸ್ಟರಾಲ್ ಮತ್ತು ಸಂತೃಪ್ತ ಮೇಧೋ ಆಮ್ಲ ಹೆಚ್ಚಿರುವ ಕೆಂಪು ಮಾಂಸ (ಹಂದಿ ಮತ್ತು ಮೇಕೆ ಮಾಂಸ) ಮತ್ತು ಹೈನು ಉತ್ಪನ್ನಗಳನ್ನು ಹೆಚ್ಚಾಗಿ ಬಳಸುವವರಲ್ಲಿ ಅಥೆರೋಸ್ಕಿಲರೋಸಿಸ್ ರೋಗ ಸಾಮಾನ್ಯವಾಗಿ ಕಂಡು ಬರುತ್ತದೆ. ಅಂದರೆ, ಮೀನಿನಲ್ಲಿ ಕೊಲೆಸ್ಟರಾಲ್ ಮತ್ತು ಸಂತ್ರಪ್ತ ಮೇಧೋ ಆಮ್ಲಗಳ ಪ್ರಮಾಣ ಕಡಿಮೆ ಇರುವುದರಿಂದ, ಮೀನಿನ ಕೊಬ್ಬು ಹೃದಯದ ಆರೋಗ್ಯದ ದೃಷ್ಟಿಯಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿದೆ.

ಹಂದಿ ಮತ್ತು ಮೇಕೆ ಮಾಂಸದಲ್ಲಿ ಸಂತೃಪ್ತ ಮೇಧೋ ಆಮ್ಲದ ಪ್ರಮಾಣ ಅನುಕ್ರಮವಾಗಿ ಶೇ. 39 ಮತ್ತು ಶೇ. 48 ಇದ್ದರೆ, ಮೀನಿನಲ್ಲಿ ಅದು ಕೇವಲ ಶೇ. 11-27 ರಷ್ಟಿದೆ. ಒಂದು ನೂರು ಗ್ರಾಂ ಬಂಗುಡೆ ಮೀನನ್ನು ಅಥವಾ ಬೇಯಿಸಿದ ಸಿಗಡಿಯನ್ನು ತಿಂದರೆ, ನಾವು ಬಳಸುವ ಸಂತೃಪ್ತ ಮೇಧೋ ಆಮ್ಲದ ಪ್ರಮಾಣ ಕೇವಲ 0.1 ರಿಂದ 0.2 ಗ್ರಾಂ ಆದರೆ, ಅಷ್ಟೇ ತೂಕದ ಮೇಕೆ ಅಥವಾ ಗೋ ಮಾಂಸದ ಬಳಕೆಯಿಂದ ಸಂತೃಪ್ತ ಮೇಧೋ ಆಮ್ಲದ ಪ್ರಮಾಣ 50 ಪಟ್ಟು ಜಾಸ್ತಿ ಅಂದರೆ, ಸುಮಾರು 11 ಗ್ರಾಂ ನಷ್ಟಿರುತ್ತದೆ.

ಮೀನನ್ನು ಪ್ರಧಾನ ಆಹಾರವಾಗಿ ಬಳಸುವ ಪಶ್ಚಿಮ ಎಸ್ಕಿಮೋ ಮತ್ತು ಜಪಾನ್ ದೇಶದ ಜನರ ರಕ್ತದಲ್ಲಿ ಕೊಲೆಸ್ಟರಾಲ್ - ಪ್ರಮಾಣ ತುಂಬಾ ಕಡಿಮೆ ಇದ್ದು ಅವರಲ್ಲಿ ಹೃದ್ರೋಗದಿಂದ ನರಳುವವರ ಸಂಖ್ಯೆ ತುಂಬಾ ವಿರಳ ಅಥವಾ ಇಲ್ಲವೇ ಇಲ್ಲ ಎನ್ನಬಹುದಾಗಿದೆ. ಆ ಜನರು ಪ್ರತಿ ದಿನ 250ರಿಂದ 400ಗ್ರಾಂನಷ್ಟು ಮೀನನ್ನು ಆಹಾರದಲ್ಲಿ ಬಳಸುತ್ತಾರೆ.

ಕ್ಯಾನ್ಸರ್ ನಿರೋಧಕ: ಅಧಿಕ ಕೊಬ್ಬಿನಿಂದ ಕೂಡಿದ ಆಹಾರವನ್ನು ಅತಿಯಾಗಿ ಸೇವಿಸುವುದರಿಂದ (ಪಾಶ್ಚಿಮಾತ್ಯ ದೇಶಗಳಲ್ಲಿ ಇದು ಸಾಮಾನ್ಯ) ಕೆಲವೊಂದು ರೀತಿಯ ಕಾರಣವೆಂದು ನಂಬಲಾಗಿದೆ. ಇತರೇ ಪ್ರಾಣಿಮೂಲ ಆಹಾರಗಳಿಗೆ ಹೋಲಿಸಿದಾಗ ಮೀನಿನಲ್ಲಿ ಕೊಬ್ಬಿನ ಅಂಶ ತುಂಬಾ ಕಡಿಮೆ ಇದೆ. ಆದ್ದರಿಂದ, ಇತರೆ ಪ್ರಾಣಿಮೂಲ ಆಹಾರಗಳ ಬದಲು ಮೀನನ್ನು ಆಹಾರವಾಗಿ ಬಳಸುವುದರಿಂದ ಕೊಬ್ಬಿನ ಸೇವನೆಯನ್ನು ಗಣನೀಯವಾಗಿ ನಿಯಂತ್ರಿಸಬಹುದಾಗಿದೆ.

ರಕ್ತದ ಒತ್ತಡ ತಗ್ಗಿಸುವಲ್ಲಿ ಪರಿಣಾಮಕಾರಿ: ಬಹಳಷ್ಟು ಜನರಲ್ಲಿ ರಕ್ತದ ಒತ್ತಡ ಹೆಚ್ಚಲು ಅವರು ತಮ್ಮ ಆಹಾರದಲ್ಲಿ ಅತಿಯಾಗಿ ಬಳಸುವ ಸೋಡಿಯಂ ಖನಿಜ ಕಾರಣವಾಗಿದೆ.

ಮೀನುಗಳಲ್ಲಿ ಸೋಡಿಯಂನ ಅಂಶ ಸಹಜವಾಗಿಯೇ ಕಡಿಮೆ ಇರುವುದರಿಂದ (ಡಬ್ಬೀಕರಿಸಿದ ಮೀನು, ಹೊಗೆಯಾಡಿಸಿದ ಮೀನು, ಉಪ್ಪಿನಿಂದ ಸಂಸ್ಕರಿಸಿದ ಮೀನು ಮತ್ತು ಒಣಗಿಸಿದ ಮೀನನ್ನು ಹೊರತು ಪಡಿಸಿ) ಮೀನನ್ನು ಬಳಸುವುದರಿಂದ ಸೋಡಿಯಂ ಬಳಕೆಯ ಪ್ರಮಾಣವನ್ನು ತಗ್ಗಿಸಬಹುದಾಗಿದೆ. ಪ್ರತಿ 100ಗ್ರಾಂ ಮೀನಿನಲ್ಲಿ ಸರಾಸರಿ 60 ಮಿ.ಗ್ರಾಂ ಸೋಡಿಯಂ ಅಡಗಿದೆ. ಪ್ರತಿನಿತ್ಯ ನಮ್ಮ ದೇಹಕ್ಕೆ 1-3 ಗ್ರಾಂ ನಷ್ಟು ಉಪ್ಪು ಸಾಕಿದ್ದರೂ, ನಾವು ಸಾಮಾನ್ಯವಾಗಿ 2-7 ಗ್ರಾಂ ನಷ್ಟು ಉಪ್ಪನ್ನು ಬಳಸುತ್ತೇವೆ.

ಮೀನಿನ ಕೊಬ್ಬು ಪ್ರಯೋಜನಕಾರಿಯಾಗಿರು ವುದರಿಂದ ಮಾಂಸಹಾರಿಗಳು ಕೋಳಿ, ಕುರಿ, ಹಂದಿಯ ಮಾಂಸವನ್ನು ತಿನ್ನುವುದನ್ನು ಕಡಿಮೆ ಮಾಡಿ ಮೀನು ತಿನ್ನುವುದು ಹಿತಕಾರಿ. ಆದರೆ ಅಧಿಕ ಪ್ರಮಾಣದ ಎಣ್ಣೆ ಬಳಸಿ ಕರಿದ ಮೀನುಗಳನ್ನು ಆಹಾರದಲ್ಲಿ ಹೆಚ್ಚಿಗೆ ಬಳಸಬೇಡಿ.

**- ಡಾ.ಎಸ್. ವಿಜಯಕುಮಾರ** ಮತ್ತು ಶ್ರೀ ಗಣೇಶ ಪ್ರಸಾದ. ಎಲ್, ಮೀನುಗಾರಿಕಾ ತಜ್ಞರು

**ನಿರಂತರ ಮಾನಸಿಕ ಗದ್ದಲ ನಿಂತು ಹೋಗಿ ಒಳಗೆ ಮೌನ ಇರುತ್ತದೆ. ಸಂಪೂರ್ಣವಾಗಿ ನಿಶ್ಚಲತೆ ಮನಸ್ಸನ್ನು ತುಂಬಿರುತ್ತದೆ. ಏನೇ ಕೆಲಸ ಮಾಡಿದರೂ ನಾನು ಮಾಡುತ್ತಿದ್ದೇನೆ ಎಂಬ ಭಾವನೆ ಇರುವುದಿಲ್ಲ. ವಿಷಯಗಳು ನಾನು ಎಂಬುದಿಲ್ಲದೆ ತಾನಾಗಿಯೇ ನಡೆಯುತ್ತವೆ. ಹೊರಗಡೆ ನಷ್ಟ, ಅವಮಾನ, ಅನಾರೋಗ್ಯ ಅಥವಾ ಹೊಗಳಿಕೆ ಏನೇ ಆಗಲಿ ಅವರ ನಿಶ್ಚಲತೆಯನ್ನು ಅವು ಕದಡುವುದಿಲ್ಲ.**

# ಜೀವನ್ಮುಕ್ತ ಸ್ಥಿತಿ ಅರ್ಥಮಾಡಿಕೊಳ್ಳುವುದು

ಜೀವನ್ಮುಕ್ತ ಸ್ಥಿತಿ ಎಂದರೆ ಸಾಧಕನು ಸಾಮಾನ್ಯ ಅಹಂಕಾರದ ಜೀವನವನ್ನು ಮೀರಿ ಹೋಗಿರುವುದು. ಹಿಡಿದುಕೊಳ್ಳುವ, ಆಸೆಪಡುವ ಮತ್ತು ಭಯಪಡುವ ನಾನು ಎಂಬುದು ಕರಗಿಹೋಗಿರುತ್ತದೆ, ಆದರೆ ಶರೀರ ಇನ್ನೂ ಬದುಕುತ್ತಿರುತ್ತದೆ. ಅಂದರೆ ವ್ಯಕ್ತಿಯ ಅಹಂಕಾರವು ಸತ್ತು, ಪ್ರಾಪಂಚಿಕ ಲೋಕದಲ್ಲಿ ಇನ್ನೂ ಬದುಕುತ್ತಿರುವ ಸ್ಥಿತಿಯಿದು.

ಜೀವನ್ಮುಕ್ತರ ಲಕ್ಷಣಗಳು: ನಿರಂತರ ಮಾನಸಿಕ ಗದ್ದಲ ನಿಂತು ಹೋಗಿ ಒಳಗೆ ಮೌನ ಇರುತ್ತದೆ. ಸಂಪೂರ್ಣವಾಗಿ ನಿಶ್ಚಲತೆ ಮನಸ್ಸನ್ನು ತುಂಬಿರುತ್ತದೆ. ಏನೇ ಕೆಲಸ ಮಾಡಿದರೂ ನಾನು ಮಾಡುತ್ತಿದ್ದೇನೆ ಎಂಬ ಭಾವನೆ ಇರುವುದಿಲ್ಲ. ವಿಷಯಗಳು ನಾನು ಎಂಬುದಿಲ್ಲದೆ ತಾನಾಗಿಯೇ ನಡೆಯುತ್ತವೆ. ಹೊರಗಡೆ ನಷ್ಟ, ಅವಮಾನ, ಅನಾರೋಗ್ಯ ಅಥವಾ ಹೊಗಳಿಕೆ ಏನೇ ಆಗಲಿ ಅವರ ನಿಶ್ಚಲತೆಯನ್ನು ಅವು ಕದಡುವುದಿಲ್ಲ. ಸಂತೋಷ ಮತ್ತು ದುಃಖಗಳು ಅವರ ಪಾಲಿಗೆ ಹಾದುಹೋಗುವ ಮೋಡಗಳಂತೆ; ಅವರು ಆಕಾಶದಂತೆ ಉಳಿದುಕೊಳ್ಳುತ್ತಾರೆ. ಅವರು ಸಂಪೂರ್ಣವಾಗಿ ಈ ಕ್ಷಣದಲ್ಲಿ ಬದುಕುತ್ತಾರೆ; ಏಕೆಂದರೆ ಭೂತ ಮತ್ತು ಭವಿಷ್ಯದ ಹಿಡಿತ ಇಲ್ಲ.

ದೈನಂದಿನ ಜೀವನದ ಚಟುವಟಿಕೆಗಳು ಮತ್ತು ಜಗತ್ತಿನೊಂದಿಗಿನ ಸಂಬಂಧ ಬಂಧನ ಇಲ್ಲದ ಶಾರೀರಿಕ ಅಗತ್ಯಗಳು ಅವರ ಲಕ್ಷಣ. ಶರೀರವನ್ನು ಇನ್ನೂ ನೋಡಿಕೊಳ್ಳಬೇಕು. ತಿನ್ನುವುದು, ಕುಡಿಯುವುದು, ಮಲಗುವುದು ಮೊದಲಿನಂತೆ ನಡೆಯುತ್ತವೆ. ಆದರೆ ಆಸಕ್ತಿ ಕಡಿಮೆ ಇರುವುದರಿಂದ ಆಹಾರ ಬಂದರೆ ತಿನ್ನುತ್ತಾರೆ; ಇಲ್ಲವಾದರೆ ಸುಮ್ಮನೆ ಇರುತ್ತಾರೆ.

ಹೊರಗಿನಿಂದ ನೋಡಿದರೆ, ಅವರು ಕುಟುಂಬ, ಗೆಳೆಯರು, ಸಮಾಜದವರೊಂದಿಗೆ ಸಹಬಾಳ್ವೆ ನಡೆಸುತ್ತಾರೆ. ಆದರೆ ಒಳಗಿನಿಂದ ನನ್ನವರು ಎಂಬ ಭಾವನೆ ಇರುವುದಿಲ್ಲ. ನನ್ನ ಮಗ, ನನ್ನ ಹೆಂಡತಿ, ನನ್ನ ಆಸ್ತಿ ಹೀಗೆ ನನ್ನದು ಎಂಬ ವಿಚಾರಗಳು ಹೋಗಿರುತ್ತವೆ.

ಅಪೇಕ್ಷೆಗಳಿಲ್ಲದೆ ಪ್ರೀತಿ ತಾನಾಗಿಯೇ ಹರಿಯುತ್ತದೆ. ಆದರೆ ಬಂಧನ ಇಲ್ಲದೆ, ಕಳೆದು ಕೊಳ್ಳುವ ಭಯವಿಲ್ಲದೆ ಅವರು ಗಾಢವಾಗಿ ಕಾಳಜಿ ವಹಿಸುತ್ತಾರೆ. ಜೀವನ್ಮುಕ್ತರಾಗಿರುವವರು ತೃಪ್ತಿಗಾಗಿ ಆಸ್ತಿ, ಸಾಧನೆ ಮತ್ತು ಸಂಬಂಧಗಳ ಹಿಂದೆ ಓಡುವುದಿಲ್ಲ.

ಅಗತ್ಯವಾದಾಗ ಸಮಾಜದೊಂದಿಗೆ ಬೆರೆಯುತ್ತಾರೆ. ಆದರೆ ಹೊಗಳಿಕೆ, ನಿಂದನೆ, ಯಶಸ್ಸು, ವಿಫಲತೆಯಿಂದ ಧೃತಿಗೆಡದೆ ಉಳಿಯುತ್ತಾರೆ ಹಾಗೂ ಯಾವುದೂ ಅವರನ್ನು ಬಂಧಿಸುವುದಿಲ್ಲ. ವೈಯಕ್ತಿಕ ಉದ್ದೇಶವಿಲ್ಲದೆ ಅವರು ಸಹಜವಾಗಿ ಬಂದಿರುವುದನ್ನು ಮಾಡುತ್ತಾರೆ. ಆದರೆ ಯಾವುದೇ ಹೆಮ್ಮೆ, ಒತ್ತಡ ಅಥವಾ ಫಲಿತಾಂಶದ ಬಗ್ಗೆ ಚಿಂತೆ ಇಲ್ಲದೆ ಅವರ ಕೆಲಸ ನಡೆಯುತ್ತದೆ.

## ದೈನಂದಿನ ಜೀವನದ ಚಟುವಟಿಕೆಗಳು...


- **ಜಗತ್ತಿನೊಂದಿಗಿನ ಸಂಬಂಧ ಬಂಧನ ಇಲ್ಲದ ಶಾರೀರಿಕ ಅಗತ್ಯಗಳು ಅವರ ಲಕ್ಷಣ. ಶರೀರವನ್ನು ಇನ್ನೂ ನೋಡಿಕೊಳ್ಳಬೇಕು.**
- **ತಿನ್ನುವುದು, ಕುಡಿಯುವುದು, ಮಲಗುವುದು ಮೊದಲಿನಂತೆ ನಡೆಯುತ್ತವೆ. ಆದರೆ ಆಸಕ್ತಿ ಕಡಿಮೆ ಇರುವುದರಿಂದ ಆಹಾರ ಬಂದರೆ ತಿನ್ನುತ್ತಾರೆ; ಇಲ್ಲವಾದರೆ ಸುಮ್ಮನೆ ಇರುತ್ತಾರೆ.**

ನಿಶ್ಚಲತೆಯ ಉಕ್ಕಿ ಹರಿಯುವಿಕೆಯಿಂದಾಗಿ ಇಂಥ ವ್ಯಕ್ತಿಯು ಶಾಂತಿಯನ್ನು ಹರಡುತ್ತಾರೆ ಮತ್ತು ಇತರರಿಗೆ ಸಹಾಯ ಮಾಡುತ್ತಾರೆ, ಆದರೆ ಅಲ್ಲಿ ಪ್ರಯಾಸ ಕಂಡು ಬರುವುದಿಲ್ಲ. ಅವರು ತಮ್ಮ ಕುಟುಂಬ ಅಥವಾ ಸಮಾಜದಲ್ಲಿ ಇರುತ್ತಾರೆ, ಆದರೆ ಬಂಧನಗಳಿಂದ ಮುಕ್ತರಾಗಿರುತ್ತಾರೆ. ಕೇವಲ ಅವರ ಉಪಸ್ಥಿತಿಯೇ ಇತರರನ್ನು ಉನ್ನತಿಗೇರಿಸುತ್ತದೆ.

ಕೆಲವೊಮ್ಮೆ ಅವರು ನೇರವಾಗಿ ಮಾರ್ಗದರ್ಶನ ಮಾಡಬಹುದು, ಆದರೆ ಹೆಚ್ಚಾಗಿ ಅವರ ಮೌನ ಮತ್ತು ಇರುವಿಕೆಯೇ ಮಾರ್ಗದರ್ಶನವಾಗುತ್ತದೆ. ಅವರಿಗೆ ಮರಣವು ಒಂದು ಘಟನೆಯಲ್ಲ, ಏಕೆಂದರೆ ಸಾಯುವ ನಾನು ಎಂಬುದು ಈಗಾಗಲೇ ಇಲ್ಲವಾಗಿರುತ್ತದೆ.

ಭೌತಿಕ ಶರೀರ ಹಳೆಯ ಬಟ್ಟೆಯಂತೆ ಬೀಳುತ್ತದೆ, ಆದರೆ ಅವರು ಜೀವಂತರಾಗಿರುವಾಗಲೇ ಮುಕ್ತರಾಗಿದ್ದರು. ಜೀವನ್ಮುಕ್ತ ವ್ಯಕ್ತಿಯು ಪ್ರಾಪಂಚಿಕ ಜಗತ್ತಿನಲ್ಲಿ ದೇಹದ ಮರಣದವರೆಗೆ ಇರುತ್ತಾರೆ. ಏಕೆಂದರೆ ದೇಹದಲ್ಲಿ ಇನ್ನೂ ಪ್ರಾಣವಿದೆ, ಆದರೆ ಒಳಗೆ ಅವರು ಮುಕ್ತರು-ಗಾಳಿಯಿಲ್ಲದ ಸ್ಥಳದಲ್ಲಿ ಇಡಲಾದ ದೀಪದಂತೆ, ಅಲುಗಾಡದೆ ಉರಿಯುತ್ತಿರುವಂತೆ...

**- ಸತ್ ಶ್ರೀ ಸುಬ್ರಹ್ಮಣ್ಯ** ಶಿವಬಾಲನ್



# ಬೆಳಿಗ್ಗೆಯಿಂದಲೇ ಮದ್ಯ ಮಾರಾಟ: ಪರವಾನಗಿ ರದ್ದುಪಡಿಸಿ

## ನಿಗದಿತ ಸಮಯದಲ್ಲಿ ಮಾತ್ರ ಮದ್ಯ ಮಾರಾಟ ಮಾಡಬೇಕು: ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರು ವಾಸಿಸುವ ಸ್ಥಳ ಸೇರಿದಂತೆ ಜಿಲ್ಲೆಯ ಎಲ್ಲಾ ಮಧ್ಯದ ಅಂಗಡಿಗಳು ನಿಗದಿತ ಸಮಯದಲ್ಲಿ ಮಾತ್ರ ಮದ್ಯ ಮಾರಾಟ ಮಾಡಬೇಕು ಹಾಗೂ ಬೇಗ ಬಾಗಿಲುಗಳನ್ನು ತೆರೆದು ಮದ್ಯ ಮಾರಾಟ ಮಾಡಿದ ಪ್ರಕರಣಗಳು ಕಂಡು ಬಂದರೆ ಪರವಾನಿಗೆ ರದ್ದು ಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, 18 ವರ್ಷದೊಳಗಿನ ಮಕ್ಕಳನ್ನು ಮದ್ಯ ಖರೀದಿಗೆ ಬಳಸಿಕೊಳ್ಳುವುದರಿಂದ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಮದ್ಯಕ್ಕೆ ಬಲಿಯಾಗಿ ಶಿಕ್ಷಣ, ಅಪರಾಧಕ್ಕೆ ಬಲಿಯಾಗುವ ಸಾಧ್ಯತೆಗಳಿವೆ. ಆದ್ದರಿಂದ ಎಲ್ಲಾ ಮದ್ಯದ ಅಂಗಡಿಗಳಿಗೂ ಕಡ್ಡಾಯವಾಗಿ ಸೂಚನೆ ನೀಡಬೇಕು ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಸಂದೇಶ್, ಮರಿ ಜೋಸೆಫ್, ಮಲ್ಲೇಶ್ ಅಂಬುಗ ಅವರು ಮಾತನಾಡಿ, ಜಿಲ್ಲೆಯಲ್ಲಿ ಹಲವು ಮದ್ಯದ ಅಂಗಡಿಗಳಲ್ಲಿ ಬೆಳಿಗ್ಗೆ 7.30 ಗಂಟೆಯಿಂದಲೇ ಮಾರಾಟ ಪ್ರಾರಂಭ ಮಾಡುತ್ತಾರೆ ಎಂದು ಆರೋಪಿಸಿದರು. ಜಿಲ್ಲಾಧಿಕಾರಿಯವರು ತನಿಖಾ ತಂಡವನ್ನು ನೇಮಿಸಿ, ಪರಿಶೀಲಿಸಿ ವರದಿ ಸಲ್ಲಿಸಬೇಕು ಹಾಗೂ ಅಂತಹ ಮದ್ಯ ಅಂಗಡಿಗಳಿಗೆ ದಂಡ ವಿಧಿಸುವಂತೆ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.




ಹಾಸನ ತಾಲ್ಲೂಕಿನ ಕಡವರಹಳ್ಳಿ ಗ್ರಾಮದ ಜೀತ ವಿಮುಕ್ತರಿಗೆ ಭೂಮಿ ನೀಡುವ ಕುರಿತು ಕೂಡಲೇ ಸ್ಥಳ ಪರಿಶೀಲಿಸಿ ಸರ್ವೆ ಕಾರ್ಯ ಮುಕ್ತಾಯಗೊಳಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಅವರಿಗೆ ಸೂಚಿಸಿದರಲ್ಲದೆ, ಸಕಲೇಶಪುರ ಕಾಡು ವ್ಯಾಪ್ತಿಯಲ್ಲಿ ವಾಸವಿರುವ ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ ಹಲಸರು, ಮಲೇರು, ಮಲೇರು ಜನಾಂಗದವರಿಗೆ ರಸ್ತೆ ಇನ್ನಿತರ ಸೌಲಭ್ಯಗಳು ಪರಿಶೀಲಿಸಿ ವರದಿ ಸಲ್ಲಿಸಬೇಕು ಹಾಗೂ ಸೌಲಭ್ಯ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಹಕ್ಕಿಪಿಕ್ಕಿ ಸಮುದಾಯಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿವೇಶನ ಹಂಚಿಕೆಗೆ 8 ಎಕರೆ ಜಾಗಕ್ಕೆ ಮೊದಲು ತಂತಿಬೇಲಿ ಆಗಬೇಕು, ಸಮಾಜ ಕಲ್ಯಾಣ ಇಲಾಖೆಯ ಆಸ್ತಿ ಎಂದು ನಾಮಫಲಕ ಹಾಕಬೇಕು. ಹೇಮಾವತಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಸಂತ್ರಸ್ತರ ಪುನರ್ ವಸತಿ ಕಾಲೋನಿಗೆ ಭೇಟಿ ನೀಡಿ ಪರಿಶೀಲನೆ ಕಂದಾಯ ಗ್ರಾಮಕ್ಕೆ ಪ್ರಸ್ತಾವನೆ ಸಲ್ಲಿಸಿ. ಸಕಲೇಶಪುರ ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಸರ್ವೆ ನಂಬರ್ 16 ರಲ್ಲಿನ ಗೋಮಾಳದ 3 ಎಕರೆ ಜಮೀನನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಮಾಜ ಕಲ್ಯಾಣ ಇಲಾಖೆಗೆ ಮಂಜೂರು ಮಾಡಿ ಪರಿಶಿಷ್ಟ ವರ್ಗಗಳ ಬುಡಕಟ್ಟು ಸಮುದಾಯ ಹಲಸರು ಟ್ರಸ್ಟ್ ಗೆ ಗಿಡಮೂಲಿಕೆಗಳು ಬೆಳೆಯಲು ನೀಡಲು ಕ್ರಮ ವಹಿಸಲು ಸೂಚಿಸಿದರು.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪೊಲೀಸ್ ಅಧಿಕಾರಿಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸೇರಿದಂತೆ ಸ್ಥಳೀಯ ಸಮುದಾಯ ಮುಖಂಡರುಗಳ ಸೇರಿಸಿ ಅರಿವು ಕಾರ್ಯಕ್ರಮವನ್ನು ನಡೆಸಬೇಕು. ಪೊಲೀಸ್ ಇಲಾಖೆಯು ಗ್ರಾಮಗಳಲ್ಲಿ ಗಸ್ತು ತಿರುಗಬೇಕು, ಶಾಂತಿಪಾಲನ ಸಮಿತಿ ರಚಿಸಿ ಸಭೆ ನಡೆಸಿ ಸ್ಥಳೀಯ ಸಂಘ ಸಂಸ್ಥೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸುವಂತೆ ಸೂಚಿಸಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರು ವಾಸಿಸುವ ಮನೆಗಳಿಗೆ ಒಂಟಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸುವುದಿಲ್ಲ ಎಂದು ಸದಸ್ಯರು ಸಭೆಯಲ್ಲಿ ಆರೋಪಿಸಿದರು. ಜಿಲ್ಲಾಧಿಕಾರಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಮಿತಿಯ ಸದಸ್ಯರಾದ ಶಿವಮ್ಮ, ಬೈರೇಶ್ ಶಿವಪ್ಪ ನಾಯಕ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ಕೃಷಿ ನಿರ್ದೇಶಕರಾದ ರಮೇಶ್, ಉಪನಿರ್ದೇಶಕ ಧೂದ್ ಪೀರ್ ಮತ್ತಿತರರು ಉಪಸ್ಥಿತರಿದ್ದರು.

# ರಾಯರ ರಂಗಮಂದಿರಕ್ಕೆ ಸುಧೀಂದ್ರ ಆಚಾರ್ಯರ ಭೇಟಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣದ ಗಾಂಧಿ ವೃತ್ತದಲ್ಲಿರುವ ರಾಯರ ರಂಗಮಂದಿರಕ್ಕೆ ಸೋಮವಾರ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ದಿವಾನ ಶ್ರೀ ಸುಧೀಂದ್ರ ಆಚಾರ್ಯರು ಭೇಟಿ ನೀಡಿದರು.

ಪೀಠಾಧಿಪತಿಗಳ ಪೂರ್ವಾಶ್ರಮದ ಕುಟುಂಬದವರು ಹಾಗು ಮಠದ ವಲಯ ಕಚೇರಿ ಮುಖ್ಯಸ್ಥ ಗೌತಮ ಆಚಾರ್ಯರು, ಶ್ರೀ ಸುಧೀಂದ್ರ ಆಚಾರ್ಯರನ್ನು ಸಾಂಪ್ರದಾಯಿಕವಾಗಿ ಮಂಗಳವಾದ್ಯಗಳೊಂದಿಗೆ ಭಕ್ತಿಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು.

ದಿವಾನರು ಮಾತನಾಡಿ, ಮಂತ್ರಾಲಯದ ಪೀಠಾಧಿಪತಿಗಳಿಂದ ಉದ್ಘಾಟಿಸಲ್ಪಟ್ಟ ಹಾಗು ಮೂಲ ರಾಮನ ಪೂಜೆ ನಡೆದ ಈ ಪವಿತ್ರ ಜಾಗವು ಸಾಕ್ಷಾತ್ ಸರಸ್ವತಿ ನೆಲೆಸಿದ ಕ್ಷೇತ್ರವೆಂದು ಮಂದಿರದ ಪಾವಿತ್ರ್ಯತೆಯನ್ನು ಕೊಂಡಾಡಿದರು.

ದಿವಾನರು ಹಾಗು ಗಣ್ಯರು ಶ್ರೀ ರಾಘವೇಂದ್ರ ಸ್ವಾಮಿಗೆ ಮಹಾ ಮಂಗಳಾರತಿ ನೆರವೇರಿಸಿದರು. ಭಕ್ತಾದಿಗಳಿಗೆ ಮಂತ್ರಾಲಯದ ಪವಿತ್ರ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ರಂಗಮಂದಿರದ ಮುಖ್ಯಸ್ಥ ಪ್ರಕಾಶ್ ಭಾರದ್ವಾಜ್, ಅನಿತಾ ಪ್ರಕಾಶ್, ಕಲಾವಿದ ರವೀಂದ್ರ, ಕೆಂಪೇಗೌಡ ವೇದಿಕೆಯ ಆನಂದ್, ಯೋಗೇಶ್, ರಾಣಿ, ಶ್ರುತಿ, ಗೌಡಗೆರೆ ರವಿ ಇತರರಿದ್ದರು.

# ಭಾರತದತ್ತ ಎಲ್‌ಪಿಜಿ ಹೊತ್ತ ಹಡಗು

• ಪ್ರಜೋದಯ ವರದಿ

**ನವದೆಹಲಿ:** ಸುಮಾರು 92,700 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ನಂದಾ ದೇವಿ ಮತ್ತು ಶಿವಾಲಿಕ್ ಎಂಬ ಎರಡು ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತಕ್ಕೆ ಬರುತ್ತಿವೆ.

ಶಿವಾಲಿಕ್ ಮಾರ್ಚ್ 16ರಂದು ಮತ್ತು ನಂದಾ ದೇವಿ ಮಾರ್ಚ್ 17ರಂದು ಆಗಮಿಸುವ ನಿರೀಕ್ಷೆಯಿದೆ ಎಂದು ತಿಳಿಸಿತ್ತು. ಈಗ ಆ ನಿರೀಕ್ಷೆಯಂತೆ ಮಾ.16 ರಂದು ಶಿವಾಲಿಕ್ ಹಡಗು ಭಾರತಕ್ಕೆ ಬಂದು ತಲುಪಿದೆ.

ಅಮೆರಿಕ- ಇರಾನ್ ಯುದ್ಧದಿಂದ ಅಡುಗೆ ಅನಿಲ ಪೂರೈಕೆಯಲ್ಲಿ ಉಂಟಾದ ವ್ಯತ್ಯಯ ಹಲವಾರು ವಲಯಗಳ ಮೇಲೆ ಪರಿಣಾಮ ಬೀರುತ್ತಿದೆ. ರೆಸ್ಟೋರೆಂಟ್‌ಗಳು,



ಹಾಸ್ಟೆಲ್‌ಗಳು ಮತ್ತು ಕೆಲವು ಕಂಪನಿಗಳು, ಮನೆಗಳು ಮತ್ತು ಹೋಟೆಲ್‌ಗಳಲ್ಲಿ ಭಾರೀ ಸಮಸ್ಯೆ ಎದುರಾಗಿದೆ.

ಎಲ್.ಪಿ.ಜಿ. ಸರಬರಾಜಲ್ಲಿ ವಿಳಂಬವಾದರೆ ಮತ್ತಷ್ಟು ಸೇವೆಗಳ ಮೇಲೆ ಪರಿಣಾಮ ಬೀರಬಹುದು. ಇದರ ನಡುವೆ ಶಿವಾಲಿಕ್ ಹಡಗು ಭಾರತ ತಲುಪಿದೆ. ಮತ್ತೊಂದು ಹಡಗು ನಂದಾ ದೇವಿ ಮಾರ್ಚ್ 17ರಂದು ಕಾಂಡ್ಲಾ ಬಂದರಿಗೆ ಆಗಮಿಸಲಿದೆ. ಇದರಿಂದ ಗ್ಯಾಸ್ ಸಮಸ್ಯೆ ಪರಿಹಾರವಾಗಲಿದೆ.

ಡಾ. ಎಸ್. ಜೈಶಂಕರ್ ಮತ್ತು ಇರಾನಿನ ವಿದೇಶಾಂಗ ಸಚಿವರ ನಡುವಿನ ಚರ್ಚೆಗಳ ನಂತರ ಈ ಬೆಳವಣಿಗೆ ನಡೆದಿದೆ.

ಈ ಮಾತುಕತೆ ಬಳಿಕ ಭಾರತದ ಹಡಗುಗಳಿಗೆ ಹಾರ್ಮೋಜ್ ಮಾರ್ಗವನ್ನು ಸುರಕ್ಷಿತವಾಗಿ ದಾಟಲು ಅನುಮತಿ ದೊರೆತಿತ್ತು.

# ಕೌಶಲ್ಯ ತರಬೇತಿ ಸ್ವಯಂ ಉದ್ಯೋಗಕ್ಕೆ ಅವಕಾಶ

## ಪಾರಂಪರಿಕ ಕೌಶಲ್ಯ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

• ಪ್ರಜೋದಯ ವರದಿ

**ಆಲೂರು:** ಯುವಜನರು ಕೌಶಲ್ಯ ತರಬೇತಿ ಪಡೆಯುವುದರಿಂದ ಸ್ವಯಂ ಉದ್ಯೋಗಕ್ಕೆ ಅವಕಾಶಗಳು ದೊರಕಲಿದೆ ಎಂದು ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತನಾಯಕ್ ತಿಳಿಸಿದರು.

ಪಟ್ಟಣದ ಹರ್ಷಿತ ಆಲೂರು ಯೋಜನೆ ವತಿಯಿಂದ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಸರ್ಕಾರದ ಸಹಯೋಗದಲ್ಲಿ 90 ನಿರುದ್ಯೋಗಿ ಅಭ್ಯರ್ಥಿಗಳಿಗೆ ಪಾರಂಪರಿಕ ಕೌಶಲ್ಯ ತರಬೇತಿ ಕಾರ್ಯಕ್ರಮವಾದ ಹ್ಯಾಂಡ್ ಎಂಬ್ರಾಯ್ಡರಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂತಹ ತರಬೇತಿಗಳಿಂದ ಹೆಚ್ಚಿನ ಪ್ರಯೋಜನವಿದ್ದು, ಆರ್ಥಿಕವಾಗಿ ಸದೃಢರಾಗಬಹುದು. ಮತ್ತು ಸ್ವಾವಲಂಬಿಗಳಾಗಿ ಬದುಕಬಹುದು ಎಂದು ಕಿವಿಮಾತು ಹೇಳಿದರು.



ಸರ್ಕಾರ ನಿರುದ್ಯೋಗಿಗಳು ಮತ್ತು ಕೌಶಲ್ಯದಲ್ಲಿ ಆಸಕ್ತಿ ಹೊಂದಿರುವ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಬಗ್ಗೆ ಆಗಾಗ ತರಬೇತಿ ನೀಡುತ್ತಿದೆ. ಕೌಶಲ್ಯ ಹೊಂದಿದವರು ಬಟ್ಟೆ ಮತ್ತು ನೂಲಿನ ಮೂಲಕ ಅನೇಕ ಅಲಂಕಾರಿಕ ವಸ್ತುಗಳನ್ನು ತಯಾರು ಮಾಡಿ, ಸ್ವಯಂ ಉಪಯೋಗಿಸಿಕೊಂಡು ಮಾರಾಟ ಮಾಡಿ ಆರ್ಥಿಕ ಅನುಕೂಲ ಪಡೆದುಕೊಳ್ಳಲು ಅವಕಾಶವಿದೆ ಎಂದು ಹೇಳಿದರು.

ಮಹಿಳೆಯರು ಮನೆಯಲ್ಲಿ ದೈನಂದಿನ ಚಟುವಟಿಕೆ ಜೊತೆಯಲ್ಲಿ ವಿರಾಮದ ಸಂದರ್ಭದಲ್ಲಿ ಎಂಬ್ರಾಯಿಡರಿ ಮಾಡುವುದರಿಂದ ಉತ್ತಮ ಕಲೆ ರೂಪಿಸಬಹುದು. ಅಲ್ಲದೆ ಉತ್ತಮ ಆಲೋಚನೆಗಳಿಂದ ತಮ್ಮ ಜೀವನ ಸಾಗಿಸಬಹುದು. ಕೌಶಲ್ಯ ತರಬೇತಿಯ ಮೂಲಕ ನಿರು ದ್ಯೋಗಿ ಯುವಕ- ಯುವತಿಯರು ಆತ್ಮ ನಿರ್ಭರರಾಗುವಂತೆ ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಈ ಸಂದರ್ಭದಲ್ಲಿ ಹಾಸನ ಜಿಲ್ಲಾ ಕೌಶಲ್ಯಾಧಿಕಾರಿ ವಿಜಯಲಕ್ಷ್ಮಿ ಅವರು ಉಪಸ್ಥಿತರಿದ್ದು, ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಶುಭಾಶಯ ಕೋರಿದರು. ನಂತರ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳೊಂದಿಗೆ ಸಂವಾದ ನಡೆಸಿ ಉತ್ತೇಜನ ನೀಡಿದರು.

ಈ ಸಂದರ್ಭದಲ್ಲಿ ಹರ್ಷಿತ ಸಂಸ್ಥೆಯ ಅಧ್ಯಕ್ಷರಾದ ನಂಜಪ್ಪಶೆಟ್ಟಿ, ಕಾರ್ಯದರ್ಶಿ ಶೈಲಜಾ, ಸಂಪನ್ಮೂಲ ವ್ಯಕ್ತಿ ಹೇಮ, ಸಂಯೋಜಕ ನವೀನ್, ನವ್ಯ, ಗೀತಾ ಉಪಸ್ಥಿತರಿದ್ದರು.

# ತೆರಿಗೆ ವಿಧಿಸುವ ಪರಮಾಧಿಕಾರ ನನಗಿದೆ: ಅಮೇರಿಕ ಅಧ್ಯಕ್ಷ ಟ್ರಂಪ್

• ಪ್ರಜೋದಯ ವರದಿ

**ವಾಷಿಂಗ್ಟನ್:** ವಿಶ್ವದ ಹಲವು ರಾಷ್ಟ್ರಗಳ ಮೇಲೆ ಹೇರಿದ್ದ ಸುಂಕವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದರೂ, ತೆರಿಗೆ ವಿಧಿಸುವ ಪರಮಾಧಿಕಾರ ನನಗಿದೆಯೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ.

ಇನ್ನೊಂದು ಸ್ವರೂಪದಲ್ಲಿ ತೆರಿಗೆ ವಿಧಿಸುವ ಪರಮಾಧಿಕಾರ ನನಗೆ ಇದೆ. ಈಗಾಗಲೇ ಅದನ್ನು ಆರಂಭಿಸಿದ್ದೇನೆಂದು ಟ್ರುಥ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ತೆರಿಗೆ ವಿಧಿಸಿದ್ದನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದ ಕೆಲವೇ ದಿನಗಳಲ್ಲಿ ಟ್ರಂಪ್ ಮತ್ತೆ ಶೇ. 10 ರಷ್ಟು ತೆರಿಗೆ ವಿಧಿಸಿದ್ದರು. ವ್ಯಾಪಾರ ಪದ್ಧತಿಯಲ್ಲಿ ಇರುವ ಲೋಪಗಳನ್ನು ತಕ್ಷಣವೇ ತಿದ್ದಿಕೊಳ್ಳಬೇಕೆಂದು ಅಮೇರಿಕಕ್ಕೆ ಚೀನಾ ವಿನಂತಿ ಮಾಡಿದ ಬೆನ್ನಲ್ಲೇ ಟ್ರಂಪ್ ಅವರಿಂದ ಈ ಹೇಳಿಕೆ ಬಂದಿದೆ. ಕೋರ್ಟ್‌ನ ತೀರ್ಪು ದೇಶದ ಸಂಸ್ಥಾಪಕರು ಅಮೇರಿಕಾದ ಸುಪ್ರೀಂ ಕೋರ್ಟ್‌ಗಾಗಿ ರೂಪಿಸಿದ ಆಶಯಗಳಿಗೆ ಅನುಗುಣವಾಗಿಲ್ಲ. ಅವರು ನಮ್ಮ ದೇಶಕ್ಕೆ ಹಾನಿ ಮಾಡುತ್ತಿದ್ದಾರೆ. ಅದನ್ನು ಮುಂದುವರಿಸಲಿದ್ದಾರೆಂದು ಟ್ರಂಪ್ ಟೀಕಿಸಿದ್ದಾರೆ.

ಅಧ್ಯಕ್ಷನಾಗಿ ನಾನು ಮಾಡಬಹುದಾದ ಏಕೈಕ ಕೆಲಸವೆಂದರೆ ಅವರ ಕೆಟ್ಟ ನಡವಳಿಕೆಯನ್ನು ಎತ್ತಿ ತೋರಿಸುವುದು. ಸುಪ್ರೀಂ ಕೋರ್ಟ್ ಕುರಿತಾದ ಈ ಹೇಳಿಕೆಯು ಭವಿಷ್ಯದಲ್ಲಿ ನನಗೆ ಕೇವಲ ಸಮಸ್ಯೆಗಳನ್ನು ತಂದೊಡ್ಡಬಹುದು, ಆದರೆ ಸತ್ಯ ಹೇಳುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

# ರೈತರಿಗೆ ಕಾಟಚಾರದ ವಿದ್ಯುತ್ ಪೂರೈಕೆ: ಚೆಸ್ಕಾಂ ಕಚೇರಿಗೆ ಮುತ್ತಿಗೆ

• ಪ್ರಜೋದಯ ವರದಿ

**ಬೇಲೂರು:** ಚೆಸ್ಕಾಂ ಇಲಾಖೆ ಕೃಷಿಕರಿಗೆ ನೀಡುವ ವಿದ್ಯುತ್‌ನ್ನು ಬೇಕಾಬಿಟ್ಟಿ ನೀಡುವ ಮೂಲಕ ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಜಾಣ ಮೌನಕ್ಕೆ ಶರಣಾಗಿದ್ದಾರೆ. ವಿಶೇಷವಾಗಿ ಯಾವುದೇ ಜನಪ್ರತಿನಿಧಿಗಳು ತುಟಿ ಬಿಚ್ಚುತ್ತಿಲ್ಲ, ಬೇಸಿಗೆ ಸಂದರ್ಭದಲ್ಲಿ ರೈತರಿಗೆ ನ್ಯಾಯಯುತ ವಿದ್ಯುತ್ ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಬೇಲೂರು ತಾಲ್ಲೂಕು ಘಟಕದ ಪದಾಧಿಕಾರಿಗಳು ಪಟ್ಟಣದ ಚೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘದ ಹಾಸನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌಡ ಮಾತನಾಡಿ, ರಾಜ್ಯ ಸರ್ಕಾರ ರೈತರನ್ನು ಹಿತವನ್ನು ಕಾಯುವ ನಿಟ್ಟಿನಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ವೇದಿಕೆಯ ಮೇಲೆ ಗಂಟೆಗಟ್ಟಲೆ ಭಾಷಣ ಮಾಡುತ್ತಾರೆ. ಆದರೆ ತೆರೆ-ಮರೆಯಲ್ಲಿ



ರೈತರಿಗೆ ಕಿರುಕುಳ ನೀಡುತ್ತಾ ಕೃಷಿಕರ ಬದುಕಿನಲ್ಲಿ ಚೆಲ್ಲಾಟ ಆಡುತ್ತಿದ್ದಾರೆ. ಈಗಾಗಲೇ ಸರ್ಕಾರ ಮಲೆನಾಡು, ಅರೆಮಲೆನಾಡು ಮತ್ತು ಬಯಲುಸೀಮೆಗೆ ವೈಜ್ಞಾನಿಕವಾಗಿ ಕರೆಂಟ್ ನೀಡುವ ಬಗ್ಗೆ ಇಲಾಖೆಯೇ ಸ್ವತಂ ನೀತಿಯನ್ನು ರೂಪಿಸಿದೆ. ಆದರೆ ಪ್ರತಿನಿತ್ಯ ಬೇಕಾಬಿಟ್ಟಿ ಕರೆಂಟ್ ಕಟ್ ಮಾಡುತ್ತಾರೆ. ಕೇಳಿದರೆ ಲೈನ್ ಕಟ್ ಅಥಾವ ಇನ್ನಿತರ ಕಾರಣದ ಜೊತೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಉಡಾಪೆಯಿಂದ ವರ್ತಿಸುತ್ತಾರೆ ಎಂದು ದೂರಿದರು.

ಚೆಸ್ಕಾಂ ಅರೆ-ಬರೆ ವಿದ್ಯುತ್‌ನಿಂದ ಕೃಷಿಕರು ರಾತ್ರಿ ವೇಳೆ ವಿಷಜಂತು ಮತ್ತು ಕಾಡಾನೆ ಪ್ರಾಣಿಗಳ ಭಯದಿಂದ ಹೊಲ-ಗದ್ದೆಗೆ ನೀರು ಬಿಡಲು ಹೋಗಬೇಕಾದ ಹೀನಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಪ್ರತಿ ತಿಂಗಳು ನಮ್ಮ ತೆರಿಗೆಯಲ್ಲಿ ಸಂಬಳ ನೀಡುತ್ತದೆ. ಅಧಿಕಾರಿಗಳು ಮಾತ್ರ ಕೆಲಸ ಮಾಡಲು ಸಬೂಬು ಹೇಳುತ್ತಿದ್ದಾರೆ. ನಮಗೆ ನ್ಯಾಯಯುತ ವಿದ್ಯುತ್ ನೀಡಬೇಕು ಇಲ್ಲವಾದರೆ ರಾಜ್ಯ ರೈತ ಸಂಘ ಪ್ರತಿನಿತ್ಯ ಚೆಸ್ಕಾಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬೇಲೂರು ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬೋಗಮಲ್ಲೇಶ್ ಮಾತನಾಡಿ, ಬೇಸಿಗೆ ಸಂದರ್ಭದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೈತರ ಗೋಳು ನಿಜಕ್ಕೂ ಹೀನಾಯವಾಗಿದೆ. ನಿರಂತರ ಜ್ಯೋತಿಯನ್ನು ದಿನ ಪೂರ್ತಿ ನೀಡುವ ಭರವಸೆ ನೀಡಿದ ಸರ್ಕಾರ ತಮಗೆ ಇಷ್ಟ ಬಂದ ರೀತಿಯಲ್ಲಿ ಕರೆಂಟ್ ನೀಡುತ್ತಿದ್ದಾರೆ. ರಿಪೇರಿಗೆ ಬಂದ ಟಿಸಿಗಳನ್ನು ಸರ್ಕಾರದ ವೆಚ್ಚದಲ್ಲಿ ರಿಪೇರಿ ಮಾಡಿಕೊಟ್ಟು ಎರಡು ದಿನದಲ್ಲಿ ನೀಡಬೇಕು ಎಂಬ ನೀತಿಯನ್ನು ಉಲ್ಲಂಘಿಸಿದ ಅಧಿಕಾರಿಗಳು ಟಿಸಿ ರಿಪೇರಿಗೆ ರೈತರಿಂದ ಹಣ ಪಡೆದು ತಿಂಗಳುಗಟ್ಟಲೆ ಕಾಯುವ ಸ್ಥಿತಿಗೆ ಕಾರಣವಾಗಿದ್ದಾರೆ ಎಂದು ಕಿಡಿಕಾರಿದರು.

ರೈತರ ಹೆಸರು ಹೇಳಿಕೊಂಡು ಅಧಿಕಾರ ಗದ್ದುಗೆ ಹಿಡಿದ ಬಳಿಕ ಸರ್ಕಾರ ಮತ್ತು ಜನಪ್ರತಿನಿಧಿಗಳು ಕೃಷಿಕರ ಮೇಲೆ ಸವಾರಿ ಮಾಡುತ್ತಾ ಶೋಷಣೆಗೆ ಮುಂದಾಗಿದ್ದಾರೆ. ರೈತರು ಯಾವ ಕಾರಣಕ್ಕೂ ಸುಮ್ಮನಿರುವುದಿಲ್ಲ. ನ್ಯಾಯ ಸಿಗುವ ತನಕ ಹೋರಾಟ ಅಚಲವೆಂದು ತಿಳಿಸಿದರು.

ಪ್ರತಿಭಟನೆಯಲ್ಲಿ ತಾಲ್ಲೂಕು ರೈತ ಸಂಘದ ಪದಾಧಿಕಾರಿಗಳಾದ ಬಸವರಾಜು, ಬಿರಟೆಮನೆ ಸುರೇಶ್, ರಂಗನಾಥ್, ಸಿದ್ದೇಗೌಡ, ಮಲ್ಲಿಕಾರ್ಜನ, ಪ್ರಸನ, ಜೆ.ಕೆ.ಸುಮಾರ, ತೀರ್ಥಕುಮಾರ್, ವಿಜಯಕುಮಾರ್, ಮಹೇಶ್ ಇನ್ನಿತರರು ಹಾಜರಿದ್ದರು.

# ನಿಷೇದಾಜ್ಞೆ ಜಾರಿ

• ಪ್ರಜೋದಯ ವರದಿ

ಹಾಸನ: 2026 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ಮಾ.18 ರಿಂದ ಏ.02 ರವರೆಗೆ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ 78 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಸದರಿ ಪರೀಕ್ಷೆ ನಡೆಯುವ ದಿನದಂದು ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿನ ಜೆರಾಕ್ಸ್ /ಸೈಬರ್/ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ಮತ್ತು ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿಗಳು ಹೊರತುಪಡಿಸಿ ಇತರರು ಯಾರು ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವನ್ನು ನಿರ್ಬಂಧಿಸಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಸೆಕ್ಷನ್ 163 ರಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

# ಆತ್ಮಸ್ಥೈರ್ಯ ಕಳೆದುಕೊಳ್ಳದೆ ಇಷ್ಟಪಟ್ಟು ಪರೀಕ್ಷೆ ಎದುರಿಸಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಈ ಬಾರಿ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಫಲಿತಾಂಶದ ನಿರೀಕ್ಷೆ ಇದ್ದು, ಪೂರಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ದತೆ ಮಾಡಲಾಗಿದೆ ಎಂದು ಬಿಇಓ ಸೋಮಲಿಂಗೇಗೌಡ ವಿಶ್ವಾಸ ವ್ಯಕ್ತಪಡಿಸಿದ್ದು, ವಿದ್ಯಾರ್ಥಿಗಳು ಇಷ್ಟಪಟ್ಟು ಪರೀಕ್ಷೆ ಬರೆಯಿರಿ, ಆತ್ಮಸ್ಥೈರ್ಯ ಕಳೆದುಕೊಳ್ಳಬೇಡಿ ಎಂದು ಕಿವಿಮಾತು ಹೇಳಿದ್ದಾರೆ.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರೀಕ್ಷಾ ಪೂರ್ವ ತಯಾರಿ ಕುರಿತು ಹೇಳಿದ ಅವರು, ಪಟ್ಟಣದಲ್ಲಿ 3 ಗ್ರಾಮೀಣ ಭಾಗದ ಶಾಲೆಗಳು 6 ಸೇರಿ ತಾಲೂಕಿನ ಒಟ್ಟು 9 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುತಿದೆ. ಈ ಬಾರಿ ಬಾಲಕರು 1096, ಬಾಲಕಿಯರು 1117 ಸೇರಿ ತಾಲೂಕಿನ 2213 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ನಿರೀಕ್ಷೆ ಇದೆ. ಆರೋಗ್ಯ ಪರೀಕ್ಷಕರು, ಪೋಲೀಸ್ ಬಿಗಿ ಬಂದೂಬಸ್ತ್, ತಹಸೀಲ್ದಾರ್ ನೇತೃತ್ವದಲ್ಲಿ ಜಾಗೃತದಳ ಇವರುಗಳ ಕರ್ತವ್ಯ ನಿಯೋಜನೆಯೊಂದಿಗೆ ಆಯಾ ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಹಾಗೂ ನಿಯೋಜಿತ ಅಧಿಕಾರಿಗಳು ಪರೀಕ್ಷಾ ಕರ್ತವ್ಯ ನಿಭಾಯಿಸಲಿದ್ದಾರೆ.

ಜಿಲ್ಲಾಧಿಕಾರಿಗಳು ಈಗಾಗಲೇ ಫ್ರೆಂಡ್ಲಿ, ಫ್ರೈಡೇ ಕಾರ್ಯಕ್ರಮದೊಂದಿಗೆ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ ನಡೆಸಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಆಯಾ ಪರೀಕ್ಷಾ



ಕೇಂದ್ರಗಳಲ್ಲಿ ಪರ್ಯಾಯ ಬೋಧನೆ ನಡೆಸ ಲಾಗಿದೆ. 180 ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಕ್ರಮದ ಮೂಲಕ ಅಂಕ ಹೆಚ್ಚಳಕ್ಕೆ ಕಾರ್ಯಾಗಾರ ನಡೆಸಲಾಗಿದೆ. ಪಟ್ಟಣದ ಬಾಲಕರ ಮತ್ತು ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು, ಪಾರ್ಕ್‌ಪಕ್ಕದ ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಗ್ರಾಮೀಣ ಭಾಗದ ಹಳ್ಳಿಮೈಸೂರು, ಹರಿಹರಪುರ, ಪಡುವಲಹಿಪ್ಪೆ, ತಟ್ಟೆಕೆರೆ ಗ್ರಾಮದ ಆದರ್ಶ, ದೊಡ್ಡಕಾಡನೂರಿನ ಜೆಎಸ್‌ಎಸ್ ಮತ್ತು ಸೋಮನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಪರೀಕ್ಷಾ ಕೇಂದ್ರಗಳಾಗಿವೆ.

ವಿದ್ಯಾರ್ಥಿಗಳಿಗೆ ಇಲಾಖೆ ನಿಯಮಾವಳಿ ಅನುಸರಿಸಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಇಟ್ಟುಕೊಂಡು ಉತ್ತರಿಸುವ ಮತ್ತು ಮೌಲ್ಯಮಾಪನಗೊಳಿಸಿ ಸೂಕ್ತ ಬೋಧನೆ ನಡೆಸುವ ಕೆಲಸ ಮಾಡಲಾಗಿದೆ. ಪರೀಕ್ಷಾ ಪೂರ್ವ ಭಾವಿ ಪರೀಕ್ಷೆ 3 ಬಾರಿ ನಡೆಸಲಾಗಿದೆ. ಪೂರ್ವಭಾವಿ ಪರೀಕ್ಷೆಗೆ 30 ನಿಮಷ ಮುನ್ನ ಮಾತ್ರವೇ ಪ್ರಶ್ನೆ ಪತ್ರಿಕೆ ತೆರೆದು ಕೊಡುವ ಇಲಾಖೆ ನಿಯಮದಂತೆ ಪರೀಕ್ಷೆ ನಡೆಸಲಾಗಿದೆ. ಇದರಲ್ಲಿ ತಾಲೂಕಿಗೆ ಶೇ 91 ರಷ್ಟು ಫಲಿತಾಂಶ ದಾಖಲಾಗಿದೆ. ಕಳೆದ ಬಾರಿ ಮುಖ್ಯ ಪರೀಕ್ಷೆಯಲ್ಲಿ ಶೇ 75.52 ಫಲಿತಾಂಶ ದೊರತಿತ್ತು. ಈ ಬಾರಿ ಹೆಚ್ಚಿನ ಫಲಿತಾಂಶದ ನಿರೀಕ್ಷೆ ಇದೆ.

ಪರೀಕ್ಷಾ ಮೇಲ್ವಿಚಾರಕರು ಉತ್ತರ ಪರೀಕ್ಷೆಗಳ ಬಂಡಲ್‌ಗಳ ಮೇಲೆ ಇದೇ ಪ್ರಥಮ ಬಾರಿಗೆ ಶಾಲೆಯ ಹೆಸರನ್ನು ನಮೋದಿಸುವಂತಿಲ್ಲ. ಬದಲಿಗೆ ಇಲಾಖೆ ನೀಡಿದ ಕೋಡ್ ನಂ ( ಗುಪ್ತ ಸಂಖ್ಯೆ) ಬರೆದು ಕಳುಹಿಸಬೇಕಿದೆ. ಇದರಿಂದ ಮೌಲ್ಯಮಾಪಕರಿಗೆ ಯಾವ ಶಾಲೆಯ ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಎಂಬುದು ಗುರುತಿಸಲಾಗದು. ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸುವ ಪರಿಣಾಮ ನಕಲು ತಡೆದು, ಪರೀಕ್ಷಾ ಅಕ್ರಮಕ್ಕೆ ಆಸ್ಪದವಾಗದು. ಬುಧವಾರ ಮಾರ್ಚ 18 ರಂದು ಪ್ರಥಮ ಬಾಷೆಯ ಪರೀಕ್ಷೆ ನಡೆಯಲಿದೆ.

# ಚಲಿಸುತ್ತಿದ್ದ ಲಾರಿಗೆ ಏಕಾಏಕಿ ಬೆಂಕಿ

• ಪ್ರಜೋದಯ ವರದಿ



**ಸಕಲೇಶಪುರ:** ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟ್‌ನಲ್ಲಿ ಏಕಾಏಕಿ ಬೆಂಕಿ ಹೊತ್ತಿಕೊಂಡು ಲಾರಿ ಸುಟ್ಟಿರುವ ಘಟನೆ ಸೋಮವಾರ ನಡೆದಿದೆ.

ಶಿರಾಡಿ ಘಾಟ್‌ನ ಕೆಂಪುಹೊಳೆ ಬಳಿ ಮೀನು ಸಾಗಾಟ ಮಾಡುವ ಲಾರಿಯೊಂದರಲ್ಲಿ ತಾಂತ್ರಿಕ ದೋಷದಿಂದ ಏಕಾಏಕಿ ಬೆಂಕಿ ಕಾಣಿಸಿಕೊಂಡು ಲಾರಿ ಬೆಂಕಿಗಾಹುತಿಯಾಗಿದೆ.

ಮಂಗಳೂರಿನಿಂದ ಮೀನು ತುಂಬಿಸಿ ಕೊಂಡು ಬೆಂಗಳೂರಿಗೆ ತೆರಳಿದ್ದ ಲಾರಿ ಖಾಲಿ ಮಾಡಿ ಮಂಗಳೂರಿಗೆ ವಾಪಾಸ್ಸಾಗುವಾಗ ಘಟನೆ ನಡೆದಿದೆ. ಲಾರಿ ಚಾಲಕ ಹಾಗು ಕ್ಲೀನರ್‌ಗೆ ಯಾವುದೇ ಅಪಾಯವಾಗಿಲ್ಲ. ಸಕಲೇಶಪುರ ಗ್ರಾಮಾಂತರ ಠಾಣೆ ಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

## ವಿದ್ಯುತ್ ಸ್ಟೌವ್‌ಗಳನ್ನು ಬಳಸಿ: ಆಹಾರ, ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ

# ಹೋಟೆಲ್‌ಗಳಿಗೆ ಸದ್ಯಕ್ಕೆ ಗ್ಯಾಸ್ ಇಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ಹೋಟೆಲ್‌ಗಳಿಗೆ ಸದ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೀಡಲು ಸಾಧ್ಯವಿಲ್ಲ. ವಿದ್ಯುತ್ ಸ್ಟೌವ್‌ಗಳನ್ನು ಬಳಸಿ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರು ಹೇಳಿದ್ದಾರೆ.

ತೈಲ ಪೂರೈಕೆ ಕಂಪನಿಗಳ ಜೊತೆ ಇಂದು ಮಹತ್ವದ ಸಭೆ ಬಳಿಕ ಮಾಧ್ಯಮದವರೊಂದಿಗೆ ಸೋಮವಾರ ಮಾತನಾಡಿದ ಅವರು, ಪರಿಸ್ಥಿತಿ ಸದ್ಯ ಗಂಭೀರವಾಗಿದೆ. ಆದ್ದರಿಂದ ಸದ್ಯಕ್ಕೆ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆಯಲ್ಲಿ ಅಡಚಣೆಯಾಗಲಿದೆ. ಇದನ್ನು ಸರಿದೂಗಿಸಲು ಎಲೆಕ್ಟ್ರಿಕ್ ಸ್ಟೌವ್‌ಗಳನ್ನು ಬಳಬೇಕೆಂದು ಸಚಿವರು ಮನವಿ ಮಾಡಿದ್ದಾರೆ. ಕೇಂದ್ರ ಸರ್ಕಾರ ಕೂಡಲೇ ಇದರ ಬಗ್ಗೆ ಗಮನ ಹರಿಸಿ ಈಗಾಗಲೇ ತೈಲ



ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದು, ಅಗತ್ಯ ಮಾಹಿತಿಗಳನ್ನು ಪಡೆದ ನಂತರ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಗೃಹಬಳಕೆ ಎಲ್‌ಪಿಜಿಗಳನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ವಿನಾಕಾರಣ ಗ್ರಾಹಕರು ಆತಂಕ ಪಡಬಾರದು. ಮಿತವಾಗಿ ಬಳಸಬೇಕು ಮತ್ತು ಡಬ್ಬಲ್ ಬುಕ್ಕಿಂಗ್ ಮಾಡಬೇಡಿ ಎಂದು ಮನವಿ ಮಾಡಿದರಲ್ಲದೆ, ಈಗಾಗಲೇ ಅನಿಲ ಪೂರೈಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಮಧ್ಯ ಪ್ರಾಚ್ಯದಿಂದ ಬಂದಿರುವ ಮೂರ್ನಾಲ್ಕು ಹಡಗುಗಳು ಸಾಕಷ್ಟು ಅನಿಲವನ್ನು ತಂದಿವೆ. ಸಂಪೂರ್ಣವಾಗಿ ರೀಫಿಲ್ಲಿಂಗ್ ಆಗಿ ಗ್ರಾಹಕರ ಕೈಸೇರಲು ಇನ್ನು ಕೆಲವು ದಿನಗಳು ಇಂತಹ ಸಮಸ್ಯೆಗಳು ಎದುರಾಗಬಹುದು ಎಂದು ಸುಳಿವು ನೀಡಿದ್ದಾರೆ.

ಮೊದಲ ಆದ್ಯತೆಯಾಗಿ ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಏರ್‌ಲೈನ್, ರೈಲ್ವೆ ಕ್ಯಾಂಟೀನ್‌ಗಳಿಗೆ ಶೇ.100 ರಷ್ಟು ಸಿಲಿಂಡರ್ ನೀಡಲು ಒಪ್ಪಿಗೆ ನೀಡಲಾಗಿದೆ. ಆರೂವರೆ ಸಾವಿರ ಸಿಲಿಂಡರ್ ಗಳ ಪ್ರತಿದಿನ ಖರ್ಚಿಗೆ ಕೇಂದ್ರ ಒಪ್ಪಿಗೆ ನೀಡಿದೆ. ಇದರಲ್ಲಿ 4,200 ಸಿಲಿಂಡರ್ ಅಗತ್ಯ ವಲಯಕ್ಕೆ ಪೂರೈಕೆ ಮಾಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ ಅವರು, ಆಟೋಗ್ಯಾಸ್ ಪೂರೈಕೆ ಮಾಡಲಾಗುತ್ತಿದೆ. ಆದರೆ ಹೋಟೆಲ್‌ಗಳಿಗೆ ಸದ್ಯಕ್ಕೆ ಪೂರೈಕೆ ಆಗುವುದಿಲ್ಲ. ಕಾಳಸಂತೆಯಲ್ಲಿ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿರುವವರ ವಿರುದ್ಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಇದಕ್ಕಾಗಿ ವಿಶೇಷ ತಂಡವೊಂದನ್ನು ರಚಿಸಿರುವುದಾಗಿ ಸಚಿವರು ತಿಳಿಸಿದರು.

ರಾಜ್ಯದಲ್ಲಿ 14 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳಿವೆ. ಅದರಲ್ಲಿ ನಾಲ್ಕುವರೆ ಸಾವಿರ ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ನಿತ್ಯ 44 ಸಾವಿರ ಸಿಲಿಂಡರ್‌ಗಳು ಬೇಕು, ಆದರೆ ವ್ಯತ್ಯಯ ಉಂಟಾಗಿದೆ ಎಂದು ಹೇಳಿದರು.

ಈಗಾಗಲೇ ಸಿಎಂ ಕೇಂದ್ರಕ್ಕೆ ಪತ್ರ ಬರೆದು ಪರಿಸ್ಥಿತಿ ಬಗ್ಗೆ ವಿವರಿಸಿದ್ದಾರೆ. ಈಗ ಕೇವಲ ಅಗತ್ಯ ವಲಯಕ್ಕೆ ಒಂದು ಸಾವಿರ ವಾಣಿಜ್ಯ ಸಿಲಿಂಡರ್‌ಗಳನ್ನು ಮಾತ್ರ ನೀಡಲಾಗುತ್ತಿದೆ ಎಂದು ತಿಳಿಸಿದರು.

# ಹಾಲ್ ಟಿಕೆಟ್ ತೋರಿಸಿದ್ರೆ ಬಸ್ಸುಗಳಲ್ಲಿ ಉಚಿತ ಪ್ರಯಾಣ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯಾದ್ಯಂತ ಎಸ್ ಎಸ್‌ಎಲ್‌ಸಿ ಪರೀಕ್ಷೆಗಳ ಕಾವು ದಿನೇ ದಿನೇ ಏರುತ್ತಿದ್ದು, ಹತ್ತನೇ ತರಗತಿ ಪರೀಕ್ಷೆಗಳು ಮಾ.18 ರಿಂದ ಆರಂಭವಾಗಲಿವೆ. ಈ ನಡುವೆ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಭರ್ಜರಿ ಸಿಹಿ ಸುದ್ದಿಯೊಂದನ್ನು ನೀಡಿದೆ.

ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ, ಸುಗಮವಾಗಿ ಪರೀಕ್ಷಾ ಕೇಂದ್ರಗಳನ್ನು ತಲುಪಲು ಅನುಕೂಲವಾಗುವಂತೆ ಕೆಎಸ್‌ಆರ್‌ಟಿಸಿ ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಪ್ರಕಟಿಸಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ನಿಗಮವು, ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಮತ್ತು ಪರೀಕ್ಷೆ ಮುಗಿದ ಬಳಿಕ ಮನೆಗೆ ಹಿಂದಿರುಗಲು ಯಾವುದೇ ಪ್ರಯಾಣ ದರವನ್ನು ಪಾವತಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಮಾರ್ಚ್



18ರಿಂದ ಏಪ್ರಿಲ್ 2 ರವರೆಗೆ ನಡೆಯಲಿವೆ. ಈ ಸಂಪೂರ್ಣ ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳು ಉಚಿತ ಬಸ್ ಸೌಲಭ್ಯವನ್ನು ಪಡೆಯಬಹುದು. ಇದಕ್ಕಾಗಿ ವಿದ್ಯಾರ್ಥಿಗಳು ಬಸ್ ಹತ್ತುವಾಗ ನಿರ್ವಾಹಕರಿಗೆ ತಮ್ಮ ಶಾಲೆಯಿಂದ ನೀಡಲಾದ ಅಧಿಕೃತ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಪ್ರವೇಶ ಪತ್ರವನ್ನು ಕಡ್ಡಾಯವಾಗಿ ತೋರಿಸಬೇಕು. ಪ್ರವೇಶ ಪತ್ರವೇ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಆಗಿ ಕಾರ್ಯ ನಿರ್ವಹಿಸಲಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಹುತೇಕ ಎಲ್ಲಾ ಸಾಮಾನ್ಯ ಬಸ್ಸುಗಳಲ್ಲಿ ಈ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೆಎಸ್‌ಆರ್‌ಟಿಸಿ ನಿಗಮದ ವ್ಯಾಪ್ತಿಗೆ ಬರುವ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹಾಲ್ ಟಿಕೆಟ್ ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು. ಐಷಾರಾಮಿ ಬಸ್ಸುಗಳನ್ನು ಹೊರತು ಪಡಿಸಿ, ಹಳ್ಳಿಗಳಿಂದ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ಸಾಮಾನ್ಯ ಬಸ್ಸುಗಳಲ್ಲಿ ಈ ನಿಯಮ ಅನ್ವಯ ವಾಗಲಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳು ಸಾಮಾನ್ಯವಾಗಿ ತಾಲೂಕು ಕೇಂದ್ರಗಳಲ್ಲಿ ಅಥವಾ ಹೋಬಳಿ ಮಟ್ಟದ ದೊಡ್ಡ ಶಾಲೆಗಳಲ್ಲಿ ಇರುತ್ತವೆ. ಹೀಗಾಗಿ, ಕುಗ್ರಾಮಗಳಿಂದ ಬರುವ ವಿದ್ಯಾರ್ಥಿಗಳು ಪ್ರತಿದಿನ ಎಂಟತ್ತು ಕಿಲೋಮೀಟರ್ ಪ್ರಯಾಣ ಮಾಡುವುದು ಅನಿವಾರ್ಯ. ಇಂತಹ ಸಮಯದಲ್ಲಿ ಬಸ್ ಚಾರ್ಜ್‌ಗಾಗಿ ಪೋಷಕರು ಪರದಾಡುವುದನ್ನು ತಪ್ಪಿಸಲು ಹಾಗೂ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೊಠಡಿ ತಲುಪಲು ಈ ಉಚಿತ ಪ್ರಯಾಣದ ವ್ಯವಸ್ಥೆ ಅತ್ಯಂತ ಸಹಕಾರಿಯಾಗಲಿದೆ.

ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾರಿಗೆ ಇಲಾಖೆಯ ಈ ನಡೆ ದೊಡ್ಡ ಮಟ್ಟದ ರಿಲೀಫ್ ನೀಡಿದೆ. ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲು ಸಾರಿಗೆ ಇಲಾಖೆಯು ತನ್ನ ಚಾಲಕರು ಮತ್ತು ನಿರ್ವಾಹಕರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದೆ. ನಿಗದಿತ ಬಸ್ ನಿಲ್ದಾಣಗಳಲ್ಲಿ ಕಡ್ಡಾಯವಾಗಿ ಬಸ್ ನಿಲ್ಲಿಸುವುದು, ವಿದ್ಯಾರ್ಥಿಗಳನ್ನು ಹತ್ತಿಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ಯಾವುದೇ ಕಾರಣಕ್ಕೂ ಹಾಲ್ ಟಿಕೆಟ್ ಹೊಂದಿರುವ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವಂತಿಲ್ಲ ಎಂದು ಎಚ್ಚರಿಸಲಾಗಿದೆ.

## ಕಲಾಪಕ್ಕೆ ಅಡ್ಡಿ: ಕಾಂಗ್ರೆಸ್ ಸದಸ್ಯರಿಗೆ ಬುದ್ಧಿ ಹೇಳಿ

» ಮೊದಲನೇ ಪುಟದಿಂದ

ಸದನದ ಬಾವಿಗೆ ಇಳಿದು ಕೂಗುವುದನ್ನು ಮಾಡಿಲ್ಲ. ಉತ್ತಮ ಸಂಸದೀಯ ಸಂಸ್ಕೃತಿಯನ್ನು ನಮ್ಮ ಪ್ರಜಾಪ್ರಭುತ್ವದ ಹಿರಿಯರು ನಮಗೆ ಕಲಿಸಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿ ದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿ ನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು ಎಂದು ತಿಳಿಸಿದ್ದಾರೆ.

ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು. ಪ್ರತಿಭಟನೆಯನ್ನು ನಾನು ವಿರೋಧಿಸುವುದಿಲ್ಲ. ವಿರೋಧ ಪಕ್ಷವು ಎಷ್ಟು ಬೇಕಾದರೂ ಪ್ರತಿಭಟಿಸಬಹುದು. ಆದರೆ ಆ ಪ್ರತಿಭಟನೆಯು 75 ವರ್ಷಗಳ ವೈಭವಯುತ ವರ್ಷಗಳಲ್ಲಿ ನಾವು ಒಟ್ಟಾಗಿ ನಿರ್ಮಿಸಿ ಕೊಂಡಿದ್ದನ್ನು ಕೆಡವುವ ರೀತಿಯಲ್ಲಿ ಇರಬಾರದೆಂದು ಹೇಳಿದ್ದಾರೆ.

# ಕೇಂದ್ರ ಸಚಿವರ ಮೊರೆಹೋದ ಜಿಲ್ಲಾ ಬೆಳೆಗಾರರು

## ಸರ್ಫೇಸಿ ಸಂಕಷ್ಟ: ಕುಮಾರಸ್ವಾಮಿ ನೇತೃತ್ವದಲ್ಲಿ ಪಿಯೂಷ್ ಗೋಯೆಲ್ ಭೇಟಿ

• ಪ್ರಜೋದಯ ವರದಿ

**ನವದೆಹಲಿ:** ಸರ್ಫೇಸಿ ಕಾಯ್ದೆಯಿಂದ ಆಗುತ್ತಿರುವ ತೊಂದರೆ ಹಾಗು ರಾಜ್ಯದಲ್ಲಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ಹಾಸನ ಜಿಲ್ಲೆಯ ಕಾಫಿ ಬೆಳೆಗಾರರು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.



ಸಂಸತ್ ಭವನದ ಕಚೇರಿಯಲ್ಲಿ ಸೋಮವಾರ ಕುಮಾರಸ್ವಾಮಿ ಅವರೊಂದಿಗೆ ಗೋಯೆಲ್ ಅವರನ್ನು ಭೇಟಿಯಾದ ಬೆಳೆಗಾರರು, ಸರ್ಫೇಸಿ ಕಾಯ್ದೆಯಿಂದ ಸಣ್ಣ, ಮಧ್ಯಮ ಗಾತ್ರದ ಕಾಫಿ ಹಿಡುವಳಿದಾರರು ಅತೀವ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಬ್ಯಾಂಕ್‌ಗಳು ಮತ್ತು ಆನ್‌ಲೈನ್ ಹರಾಜಿನಲ್ಲಿ ಭಾಗವಹಿಸುವ ವಿದೇಶಿ ಬಿಡ್ಡುದಾರರು ಶಾಮೀಲಿನ ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ಮಾಡುವುದಕ್ಕೂ ನಮ್ಮಲ್ಲಿ ಹಣವಿಲ್ಲವೆಂದು ಅಲವತ್ತುಕೊಂಡರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಸಂಸದರಾದ ತೇಜಸ್ವಿ ಸೂರ್ಯ, ಮಲ್ಲೇಶ್ ಬಾಬು ಹಾಗು ಜಿಲ್ಲಾ ಕಾಫಿ ಬೆಳೆಗಾರರ ಸಂಘದ ಪದಾಧಿಕಾರಿಗಳು, ಬೆಳೆಗಾರರು ಇದ್ದ ನಿಯೋಗದ ನೇತೃತ್ವ ವಹಿಸಿದ್ದ ಸಚಿವ ಕುಮಾರಸ್ವಾಮಿ ಅವರು, ಸರ್ಫೇಸಿ ಕಾಯ್ದೆಯಿಂದ ಈಗಾಗಲೇ ಕಾಫಿ ಬೆಳೆಗಾರರು ಅನೇಕ ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ಈ ಬಗ್ಗೆ ಹಣಕಾಸು ಸಚಿವರಿಗೂ ಮನವಿ ಸಲ್ಲಿಸಲಾಗಿದೆ. ಈ ಸಂಕಷ್ಟದಿಂದ ಕಾಫಿ ಬೆಳೆಗಾರರನ್ನು ಪಾರು ಮಾಡಬೇಕೆಂದು ಕೋರಿದರು.

ವಿದೇಶಿ ಬಿಡ್ಡುದಾರರು ಆನ್‌ಲೈನ್ ಹರಾಜಿನಲ್ಲಿ ಭಾಗಿಯಾಗುವುದನ್ನು ತಡೆಯುವ ಬಗ್ಗೆ ವಿತ್ತ ಸಚಿವರು ಭರವಸೆ ನೀಡಿದ್ದಾರೆ. ತಾವೂ ಈ ನಿಟ್ಟಿನಲ್ಲಿ ಬೆಳೆಗಾರರ ಕಷ್ಟಕ್ಕೆ ಸ್ಪಂದಿಸಬೇಕು. ಸಾವಿರಾರು ಕಾಫಿ ಬೆಳೆಗಾರರಿಗೆ ಇದರಿಂದ ಸಂಕಷ್ಟ ಎದುರಾಗಿದೆ. ಸಾಲ ಮಾಡಿದ ತಪ್ಪಿಗೆ ತಮಗೆ ಗೊತ್ತಿಲ್ಲದೆಯೇ ಭೂಮಿಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ವಾಣಿಜ್ಯ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ನಿಯೋಗದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಪಿಯೂಷ್ ಗೋಯೆಲ್ ಅವರು, ಈ ಬಗ್ಗೆ ತಮ್ಮ ಇಲಾಖೆಯಿಂದಲೂ ಪರಿಶೀಲನೆ ನಡೆಸಲಾಗುವುದು ಹಾಗೂ ವಿತ್ತ ಸಚಿವರಲ್ಲಿ ಮನವಿ ಮಾಡ ಲಾಗುವುದೆಂದು ಭರವಸೆ ನೀಡಿದರು.

### ವನ್ಯಜೀವಿ-ಮಾನವ ಸಂಘರ್ಷ ಪ್ರಸ್ತಾಪ

ಇದೇ ವೇಳೆ ಕಾಫಿ ಬೆಳೆಗಾರರು ಎದುರಿಸುತ್ತಿರುವ ವನ್ಯಜೀವಿ-ಮಾನವ ಸಂಘರ್ಷದ ಬಗ್ಗೆಯೂ ಸಚಿವ ಕುಮಾರಸ್ವಾಮಿ ಅವರು ವಾಣಿಜ್ಯ ಸಚಿವರ ಗಮನ ಸೆಳೆದರು. ಹಾಸನ, ಕೊಡಗು, ಚಿಕ್ಕ ಮಗಳೂರು ಸೇರಿ ನಾನಾ ಭಾಗಗಳಲ್ಲಿ ರೈತರ ಬೆಳೆಗಳ ಮೇಲೆ ಆನೆಗಳ ದಾಳಿ ವಿಪರೀತವಾಗಿದೆ. ಈ ಸಂದರ್ಭದಲ್ಲಿ ಮಾನವ ಸಾವುಗಳು ಸಾಕಷ್ಟು ಸಂಭವಿಸುತ್ತಿವೆ. ಇದನ್ನು ತಪ್ಪಿಸುವ ಬಗ್ಗೆ ಕೆಲ ದಿನಗಳ ಹಿಂದೆ ಕೇಂದ್ರದ ಅರಣ್ಯ ಸಚಿವರಾದ ಭೂಪೇಂದ್ರ ಯಾದವ್ ಅವರೊಂದಿಗೆ ಚರ್ಚಿಸಲಾಗಿದೆ. ಈ ಬಗ್ಗೆಯೂ ತಮ್ಮ ನೆರವು ಬೇಕೆಂದು ಕುಮಾರಸ್ವಾಮಿ ಮನವಿ ಮಾಡಿದರು.

ಈ ಮನವಿಗೂ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಗೋಯೆಲ್ ಅವರು, ಈ ಬಗ್ಗೆ ಅತ್ಯಂತ ತ್ವರಿತವಾಗಿ ಅರಣ್ಯ ಸಚಿವರ ಜೊತೆ ಚರ್ಚಿಸುವುದಾಗಿ ಭರವಸೆ ನೀಡಿದರು.

## ರೈತ ಸಂಘದಿಂದ ಅನಿರ್ದಿಷ್ಟಾವಧಿ ಹೋರಾಟ

» ಮೊದಲನೇ ಪುಟದಿಂದ

ಮತ್ತು ಧೂಳು ಸುತ್ತಮುತ್ತಲಿನ ಕೃಷಿಭೂಮಿ ಸೇರಿ ಕಾಫಿ, ಮೆಣಸು, ಭತ್ತ ಸೇರಿ ವಿವಿಧ ಬೆಳೆಗಳಿಗೆ ಹಾನಿಯಾಗುತ್ತಿದೆ ಎಂದು ರೈತರು ಅಲವತ್ತುಕೊಂಡರು.ಈ ಹಿನ್ನೆಲೆಯಲ್ಲಿ ಕೂಡಲೇ ಗಣಿಗಾರಿಕೆ ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಬೇಲೂರು ತಾಲ್ಲೂಕಿನ ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಾರ್ಡ್ ನಂ.2ರ ದೇವರಾಜಪುರ ಅಂಬೇಡ್ಕರ್ ಬೀದಿಯಲ್ಲಿ 1950 ರಿಂದ ಸುಮಾರು 300 ರಿಂದ 400 ಕುಟುಂಬ ಮನೆ ಕಟ್ಟಿಕೊಂಡು ವಾಸಿಸುತ್ತಿವೆ. ಪರಿಶಿಷ್ಟ ಜಾತಿ, ಪಂಗಡ ಸೇರಿ ಇತರೆ ಸಮುದಾಯಗಳ ಜನರು ವಾಸಿಸುತ್ತಿದ್ದರೂ ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ಸೇರಿದಂತೆ ಮೂಲ ಭೂತ ಸೌಲಭ್ಯ ಕೊರತೆ ಇದ್ದು, ಸೌಯರ್ಕ ಒದಗಿಸಬೇಕೆಂದು ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾರೂ ಸ್ಪಂದಿಸಿಲ್ಲವೆಂದು ದೂರಿದರು.

ಇತ್ತೀಚಿಗೆ ಕೆಲ ರಿಯಲ್ ಎಸ್ಟೇಟ್ ವ್ಯವಹಾರಸ್ಥರು ಇಲ್ಲಿನ ಜನರನ್ನು ಒಕ್ಕಲೆಬ್ಬಿಸಲು ಯತ್ನಿಸುತ್ತಿದ್ದಾರೆಂಬ ಆರೋಪವೂ ಕೇಳಿಬಂದಿದೆ. ಸರ್ಕಾರ ಹಾಗೂ ಅಧಿಕಾರಿಗಳು ಈ ವಿಷಯದಲ್ಲಿ ಸೂಕ್ತ ತನಿಖೆ ನಡೆಸಿ, ರಿಯಲ್ ಎಸ್ಟೇಟ್ ದೌರ್ಜನ್ಯ ನಿಲ್ಲಿಸಬೇಕೆಂದು ಒತ್ತಾಯಿಸಿದರು.

ನಗರದ ರಾಘವೇಂದ್ರ ಕಾಲೋನಿ (ಬೀರನಹಳ್ಳಿ ಕೆರೆ) ಪ್ರದೇಶದಲ್ಲಿ ವಾಸಿಸುತ್ತಿದ್ದ ಸುಮಾರು 75 ಬಡ ಕುಟುಂಬಗಳನ್ನು 2007, ಮೇ 11 ರಂದು ತೆರವುಗೊಳಿಸಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೂ ಅರ್ಹರಿಗೆ ನಿವೇಶನ ನೀಡಿಲ್ಲ. ನಿವೇಶನ ಸಿಗದ ಕಾರಣ ಬಡ ಕುಟುಂಬಗಳು ಬಾಡಿಗೆ ಮನೆಗಳಲ್ಲಿ ವಾಸಿಸುವಂತಾಗಿದ್ದು, ಹಲವರಿಗೆ ಬಾಡಿಗೆ ಕಟ್ಟಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಇನ್ನೂ ಕೆಲವರು ಆರ್ಥಿಕ ಸಂಕಷ್ಟದಿಂದ ಬೀದಿ ಪಾಲಾಗುವ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ನಿವೇಶನ ನೀಡಿ ಮನೆ ನಿರ್ಮಾಣಕ್ಕೆ ಅಗತ್ಯ ನೆರವು ಒದಗಿಸಬೇಕೆಂದು ಆಗ್ರಹಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು, ರಾಜ್ಯ ಸಂಚಾಲಕ ಮಹಮ್ಮದ್ ಸಾದಿಕ್, ಸ್ಥಳೀಯರಾದ ಫ್ರಾನ್ಸಿಸ್ ಕ್ಸೇವಿಯರ್, ಫಾದರ್ ಪ್ರಶಾಂತ್, ಕರವೇ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್, ಉಪಾಧ್ಯಕ್ಷ ವೆಂಕಟೇಶ್, ಅರುಣ ಭಾಸ್ಕರ್, ಪವಿತ್ರ, ರಂಗಮ್ಮ, ಕವಿತ ಇದ್ದರು.

## ಆನಂದದ ಅನುಭೂತಿ ಶಿಬಿರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಮತ್ತು ತಾಲ್ಲೂಕು ಲಯನ್ಸ್ ಕ್ಲಬ್ ವತಿಯಿಂದ ಮಾ.22 ರಿಂದ 28ರವರೆಗೆ ಆನಂದದ ಅನುಭೂತಿ ಶಿಬಿರ ಆಯೋಜಿಸಲಾಗಿದೆ ಎಂದು ಆಯೋಜಕ ರಮೇಶ್ ಜಾಲಿಹಾಳ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಈ ಶಿಬಿರವು ಯೋಗ, ಪ್ರಾಣಾಯಾಮ, ಧ್ಯಾನ ಹಾಗು ಸುದರ್ಶನ ಕ್ರಿಯೆ ಆಧಾರಿತ ವಿನೂತನ ಕಾರ್ಯಕ್ರಮ. ದಿನಕ್ಕೆ ಮೂರು ಬ್ಯಾಚ್ ಹಮ್ಮಿಕೊಳ್ಳಲಾಗಿದೆ. ಮೊದಲ ಬ್ಯಾಚ್ ಬೆಳಿಗ್ಗೆ 6 ರಿಂದ 8.30, 2ನೇ ಬ್ಯಾಚ್ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30, ಮೂರನೇ ಬ್ಯಾಚ್ ಸಂಜೆ 6 ರಿಂದ 8.30ರ ವರೆಗೆ ನಡೆಯಲಿದೆಯೆಂದರು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಈ ಕಾರ್ಯ ಕ್ರಮವು ಈಗಾಗಲೇ 190 ದೇಶಗಳಲ್ಲಿ ಕೋಟ್ಯಾಂತರ ಜನರಿಗೆ ಒತ್ತಡಮುಕ್ತ ಮನಸ್ಸು ಮತ್ತು ಆರೋಗ್ಯ ಸುಧಾ ರಣೆಗೆ ನೆರವಾಗಿದೆಯೆಂದರು. 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಮುಕ್ತ ಅವಕಾಶ, ಜ್ಞಾನ ಮತ್ತು ಮನಸ್ಸಿನ ಸ್ಥಿತಿಯ ಬಗ್ಗೆ ಪರಿಚಯ, ಒತ್ತಡ ನಿಬಾಯಿಸಲು ಪ್ರಾಯೋಗಿಕ ತಂತ್ರಜ್ಞಾನ,ಆರೋಗ್ಯ, ಕಾರ್ಯಕ್ಷಮತೆ ಹಾಗು ಸಾಮರ್ಥ್ಯ ಹೆಚ್ಚಿಸು ವುದು, ವಿಶೇಷ ಕ್ರಿಯೆ ಕಲಿಯಲು ಉಲ್ಲಾಸ ಭರಿತ ಶಿಬಿರವಾಗಿದೆ. ಮಾಹಿತಿಗೆ ಮೊ.ನಂ. 8197637800, 948241 9671ಗೆ ಸಂಪರ್ಕಿಸ ಬಹುದೆಂದರು.

ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಸಿ.ಆರ್.ಪರಮೇಶ್ ಅವರು ಮಾತನಾಡಿ, ಕ್ರಿಯೆ ಅಭ್ಯಾಸದ ನಂತರ ತಮ್ಮ ಆರೋಗ್ಯದಲ್ಲಿ ಕಂಡುಬಂದ ಸಕಾರಾತ್ಮಕ ಬದಲಾವಣೆಗಳನ್ನು ವಿವರಿಸಿದರು. ಆರ್ಟ್ ಆಫ್ ಲಿವಿಂಗ್ ಶಿಕ್ಷಣ ಸಮಿತಿ ಹಿರಿಯ ಶಿಕ್ಷಕಿ ಗೀತಾ ಜಲಾಲ್, ಸುದರ್ಶನ ಕ್ರಿಯೆಯಿಂದ ಜೀವನದಲ್ಲಿ ಉಂಟಾದ ಶಾಂತಿ ಹಾಗು ಸಮತೋಲನದ ಬಗ್ಗೆ ಮಾತನಾಡಿದರು.

ಆರ್ಟ್ ಆಫ್ ಲಿವಿಂಗ್ ಸದಸ್ಯೆ ನಿರ್ಮಲ, ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಲಯನ್ ಗಿರೀಶ್, ಕಾರ್ಯದರ್ಶಿ ಗೋವಿಂದರಾಜು, ಆರ್ ಎಸ್‌ಎಸ್ ಮುಖ್ಯಸ್ಥ ಗಜಾನನ, ಮನೋಹರ್ ಇದ್ದರು.

## ಪರೀಕ್ಷಾ ಸಿಬ್ಬಂದಿ ಎಡವಟ್ಟು: ಪ್ರಶ್ನೆಪತ್ರಿಕೆ ಅದಲು ಬದಲು

» ಮೊದಲನೇ ಪುಟದಿಂದ

ಸಂಖ್ಯೆಯ ಆಧಾರದ ಮೇಲೆ ಪ್ರಶ್ನೆ ಪತ್ರಿಕೆಗಳನ್ನು ಕಳುಹಿಸಲಾಗುತ್ತದೆ. ಪರೀಕ್ಷಾ ಕೇಂದ್ರದಲ್ಲಿ ಜವಾಬ್ದಾರಿಯಿಲ್ಲದೆ ಎಲ್ಲರೂ ಹಳೆಯ ಪಠ್ಯಕ್ರಮದ ವಿದ್ಯಾರ್ಥಿಗಳೇ ಎಂದು ಊಹಿಸಿ ಪ್ರಶ್ನೆಪತ್ರಿಕೆ ವಿತರಿಸಿರುವುದು ತಪ್ಪು ಎಂದು ಹೇಳಿದರು.

ಒಂದೇ ಪರೀಕ್ಷಾ ಕೊಠಡಿಯಲ್ಲಿ ಜೂನಿಯರ್ ಕಾಲೇಜಿನ ನಾಲ್ವರು ಹಾಗು ಸರ್ವೋದಯ ಕಾಲೇಜಿನ ಮೂವರು ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದರು. ಹಳೆಯ ಹಾಗು ಹೊಸ ಪಠ್ಯಕ್ರಮಗಳಲ್ಲಿ ಕೆಲವು ಅಧ್ಯಾಯಗಳು ಒಂದೇ ರೀತಿಯಾಗಿ ದ್ದರಿಂದ ವಿದ್ಯಾರ್ಥಿಗಳು ಆರಂಭದಲ್ಲಿ ಅನುಮಾನಿಸದೇ ಮೂರು ಗಂಟೆಗಳ ಕಾಲ ಪರೀಕ್ಷೆ ಬರೆದಿದ್ದಾರೆ. ನಂತರ ಇತರೆ ವಿದ್ಯಾರ್ಥಿಗಳ ಪ್ರಶ್ನೆಪತ್ರಿಕೆಗಳನ್ನು ಹೋಲಿಸಿ ನೋಡಿದಾಗ ತಪ್ಪು ಗೊತ್ತಾಗಿದೆ ಎಂದು ತಿಳಿಸಿದರು.

**ಕಣ್ಣೀರು ಹಾಕಿದ ವಿದ್ಯಾರ್ಥಿನಿಯರು:** ನಾವು ಬಡ ಕುಟುಂಬದ ಮಕ್ಕಳು. ನಮ್ಮ ಪೋಷಕರು ಕಷ್ಟಪಟ್ಟು ನಮಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ಪ್ರಶ್ನೆಪತ್ರಿಕೆ ವಿತರಣೆಯ ವೇಳೆ ನಡೆದ ನಿರ್ಲಕ್ಷ್ಯದಿಂದ ನಮ್ಮ ಭವಿಷ್ಯಕ್ಕೆ ಹೊಡೆತ ಬಿದ್ದಿದೆ. 3 ಗಂಟೆಗಳ ಪರೀಕ್ಷೆಯನ್ನು ಕೇವಲ ಅರ್ಧ ಗಂಟೆಯಲ್ಲಿ ಹೇಗೆ ಬರೆ ಯಲು ಸಾಧ್ಯ ಎಂದು ಅಳಲು ತೋಡಿಕೊಂಡರು. ಸಮಸ್ಯೆ ಕುರಿತು ಪ್ರಾಂಶುಪಾಲರನ್ನು ಸಂಪರ್ಕಿಸಿದಾಗ ಸರಿಯಾದ ಸ್ಪಂದನೆ ದೊರಕಿಲ್ಲವೆಂದು ಆರೋಪಿಸಿದ್ದಾರೆ.

**ಲೋಪ ಗಂಭೀರವಾಗಿ ಪರಿಗಣಿಸಲು ಆಗ್ರಹ**

ಪರೀಕ್ಷೆ ಮುಗಿದ ಬಳಿಕ ವಿದ್ಯಾರ್ಥಿಗಳನ್ನು ಮತ್ತೆ ಒಳಗೆ ಕರೆದು ಸರಿಯಾದ ಪ್ರಶ್ನೆಪತ್ರಿಕೆ ನೀಡಿದರೂ ಕೇವಲ 45 ನಿಮಿಷ ಮಾತ್ರ ಕಾಲಾವಕಾಶ ನೀಡಲಾಗಿದೆ. 3 ಗಂಟೆಗಳ ಪರೀಕ್ಷೆಯನ್ನು ಅಷ್ಟು ಕಡಿಮೆ ಸಮಯದಲ್ಲಿ ಬರೆಯುವುದು ಸಾಧ್ಯವಿಲ್ಲ. ಈ ಕುರಿತು ಮೇಲ್ಮಟ್ಟದ ಅಧಿಕಾರಿಗಳಿಗೆ ದೂರು ನೀಡಲಾಗುವುದು. ಅಗತ್ಯವಿದ್ದರೆ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಅಥವಾ ನ್ಯಾಯಸಮ್ಮತ ಪರಿಹಾರ ನೀಡುವ ಬಗ್ಗೆ ಸರ್ಕಾರ ಹಾಗು ಶಿಕ್ಷಣ ಮಂಡಳಿ ಗಂಭೀರವಾಗಿ ಚಿಂತನೆ ಮಾಡಬೇಕೆಂದು ಉಪ ನ್ಯಾಸಕರು ಒತ್ತಾಯಿಸಿದ್ದಾರೆ.

## ಆಲಿಕಲ್ಲು ಸಹಿತ ಧಾರಾಕಾರ ಮಳೆ: ನಗರದಲ್ಲಿ ಜನರ ಪರದಾಟ

» ಮೊದಲನೇ ಪುಟದಿಂದ

### ಮಳೆ ನಿರೀಕ್ಷೆಯಲ್ಲಿ ಕಾಫಿ ಬೆಳೆಗಾರರು

ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕು ವ್ಯಾಪ್ತಿಯ ಕಾಫಿ ಬೆಳೆಗಾರರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಕೆಲ ಭಾಗಗಳಲ್ಲಿ ತುಂತುರು ಮಳೆಯಾದರೆ, ಇನ್ನು ಹಲವೆಡೆ ಮೋಡ ಕವಿದ ವಾತಾವರಣ ಇದ್ದರೂ ಮಳೆಯಾಗಿಲ್ಲ, ಹೀಗಾಗಿ ಕಾಫಿ ಬೆಳೆಗಾರರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಬಿಸಿಲ ತಾಪ ಏರಿಕೆಯಾಗಿರುವುದರಿಂದ ಕಾಫಿ ತೋಟಗಳಿಗೆ ನೀರು ಹಾಯಿಸುವುದು ಅನಿವಾರ್ಯವಾಗಿದೆ. ಈ ನಡುವೆ ಮಳೆ ಮುನ್ಸೂಚನೆ ಇದ್ದರೂ ಮಳೆ ಬರದೆ ಇರುವುದು ನಿರಾಸೆ ಮೂಡಿಸಿದೆ.

ನಡೆಸಿದರು. ಕೆಲವರ ವಸ್ತುಗಳು ಮಳೆಯಿಂದ ತೇವ ವಾಗಿ ನಷ್ಟ ಉಂಟಾಯಿತು. ನಗರದ ಕೆಲವು ಪ್ರದೇಶಗಳಲ್ಲಿ ಗಾಳಿ ಸಹಿತ ಮಳೆ ಸುರಿದ ಪರಿ ಣಾಮ ಮರಗಳ ಸಣ್ಣಪುಟ್ಟ ಕೊಂಬೆಗಳು ಮುರಿದು ಬಿದ್ದಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ.

ಬೇಸಿಗೆ ಆರಂಭವಾಗುತ್ತಿರುವ ಸಮಯದಲ್ಲಿ ಅಕಾಲಿಕ ಮಳೆ ಸುರಿದಿರುವುದು ಜನರಲ್ಲಿ ಅಚ್ಚರಿಯನ್ನುಂಟು ಮಾಡಿತು. ದಿನಪೂರ್ತಿ ಉರಿ ಬಿಸಿಲಿನಿಂದ ಬಳಲುತ್ತಿದ್ದ ಜನರಿಗೆ ಮಳೆಯ ನಂತರ ವಾತಾವರಣದಲ್ಲಿ ತಂಪು ಹೆಚ್ಚಾಗಿ ಸ್ವಲ್ಪ ಮಟ್ಟಿಗೆ ನಿರಾಳತೆ ದೊರಕಿತು.

ಭಾನುವಾರವೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಚದುರಿದ ಮಳೆಯಾಗಿದೆ. ಆಲೂರು ಪಟ್ಟಣ, ಕುಂದೂರು, ಪಾಳ್ಯ, ಬೇಲೂರು ತಾಲ್ಲೂಕಿನ ಹಳೇಬೀಡು, ಮಾದಿಹಳ್ಳಿ, ಸಕಲೇಶಪುರ ತಾಲ್ಲೂಕಿನ ಹಾನುಬಾಳು, ಹೆತ್ತೂರು ಮತ್ತು ಯಸಳೂರು ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ.

## ಯಾವ ಮಕ್ಕಳಿಗೂ ಅನಾಥ ಪ್ರಜ್ಞೆ ಕಾಡಬಾರದು

» ಮೊದಲನೇ ಪುಟದಿಂದ

ಸ್ವೀಕರಿಸಬಹುದು. ನಾಲ್ಕರಿಂದ ಐದು ವರ್ಷಗಳ ಬಳಿಕ ಮಕ್ಕಳು ಪೋಷಕರ ಸುಪರ್ದಿಗೆ ಬರುತ್ತಾರೆಂದರು.

ಈ ನಿಟ್ಟಿನಲ್ಲಿ ಸಾಮಾಜಿಕ ಪರಿವರ್ತನೆ ಬೇಕಾಗುತ್ತದೆ. ಪ್ರಬುದ್ಧ ತಂದೆ-ತಾಯಿ ಇದ್ದರೆ ತಮಗೆ ಮಕ್ಕಳಾಗದಿದ್ದರೂ ದತ್ತು ಪಡೆದು ಮಗುವನ್ನು ಅದೇ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಮೊದಲೆಲ್ಲ ಮಕ್ಕಳಾಗದಿದ್ದರೆ ಅಂತಹ ದಂಪತಿಯನ್ನು ಬೇರೆ ದೃಷ್ಟಿಯಿಂದ ನೋಡಲಾಗುತ್ತಿತ್ತು. ಸ್ತ್ರೀಗೆ ಮಗು ಆಗದಿದ್ದರೆ ಬಂಜೆ ಎಂದು ಕರೆಯುತ್ತಿದ್ದರು. ಮಕ್ಕಳಾಗಿಲ್ಲ ವೆಂದು ಕೀಳಾಗಿ ಕಾಣುತ್ತಿದ್ದರು. ಇತ್ತೀಚೆಗೆ ಅದು ಸಹ ಸಾಮಾನ್ಯ ಪ್ರಕ್ರಿಯೆ. ಮಗುವನ್ನು ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಳ್ಳುವುದು ಸುಲಭ. ಆದರೆ ಆ ಬಳಿಕ ಕಾಪಾಡಿ ಕೊಳ್ಳುವುದು ಸವಾಲಿನ ಕೆಲಸ. ನಮ್ಮದು ತುಂಬಾ ಬಲಿಷ್ಠ ಕುಟುಂಬ ವ್ಯವಸ್ಥೆ. ಮಗುವಿನ ಜೀವನ ಕುಟುಂಬದೊಂದಿಗೆ ಪರಿಪೂರ್ಣವಾಗುತ್ತಿತ್ತು. ಆದರೀಗ ಅವಿಭಕ್ತ ಕುಟುಂಬ ಪದ್ಧತಿ ಜಾರಿಗೆ ಬಂದಿದೆ. ಆದರೂ ಸವಾಲುಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆಯೆಂದರು.

ಎರಡ್ಮೂರು ದಶಕಗಳ ಹಿಂದೆ ಭ್ರೂಣ ಹತ್ಯೆ ವಿಪರೀತವಾಗಿತ್ತು. ಅದರ ಪರಿಣಾಮವನ್ನು ಲಿಂಗ ಅಸಮಾನತೆ ಮೂಲಕ ಇಂದು ಕಾಣುತ್ತಿದ್ದೇವೆ. ಆದ್ದರಿಂದ ಯಾರೂ ಕೂಡ ಹೆಣ್ಣಿನ ಬಗ್ಗೆ ತಾತ್ಸಾರ ತೋರಬಾರದೆಂದು ಸಲಹೆ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಅವರು ಮಾತನಾಡಿ, ಬಾಲ್ಯ ವಿವಾಹಕ್ಕೆ ಕಡಿವಾಣ ಹಾಕದಿದ್ದರೆ ಭಾರೀ ಸಮಸ್ಯೆ ಎದುರಿಸಬೇಕಾಗುತ್ತದೆ. ಅಪ್ರಾಪ್ತರಿಗೆ ಮದುವೆ ಮಾಡುವುದರಿಂದ ಬೇಗ ಗರ್ಭಿಣಿಯಾಗುತ್ತಾರೆ. ಕಾನೂನು ಪ್ರಕಾರ ಅದು ಶಿಕ್ಷಾರ್ಹ ಅಪರಾಧ. ಈ ಕಾಯ್ದೆಯಡಿ ಆರೋಪಿಗಳೆಲ್ಲರನ್ನೂ ಬಂಧಿಸಬೇಕಾಗುತ್ತದೆ. ಆ ರೀತಿ ಕಾನೂನು ಜಾರಿಗೆ ಮುಂದಾದರೆ ಇಡೀ ಸಮಾಜ ಜೈಲಿನಲ್ಲಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಚಿಂತನೆ ನಡೆಸಬೇಕಿದೆಯೆಂದರು.

**ಪೊಲೀಸ್ ಇರದೆ ನೆಮ್ಮದಿ ಇರುತ್ತಿರಲಿಲ್ಲ**

ಭಿಕ್ಷಾಟನೆ, ಬಾಲ ಕಾರ್ಮಿಕ ಪದ್ಧತಿ, ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಪರಿತ್ಯಕ್ತ ಮಕ್ಕಳು, ಕಾಣೆಯಾದವರ ಪತ್ತೆ, ಮಾದಕ ವ್ಯಸನಿಗಳ ಬಂಧನ ಹೀಗೆ ಎಲ್ಲಾ ಕಡೆ ಪೊಲೀಸರು ಇರಬೇಕು. ಸಮಾಜದಲ್ಲಿ ಪೊಲೀಸರು ಎಂದರೆ ಕರಿಬೇವು ಸೊಪ್ಪು ಇದ್ದ ಹಾಗೆ. ಅದು ಇಲ್ಲದೆ ಅಡುಗೆ ಆಗುವುದಿಲ್ಲ, ಯಾರೂ ತಿನ್ನುವುದಿಲ್ಲವೆಂದರು.

ಪೊಲೀಸರು ಇಲ್ಲದ ಒಂದು ದಿನವನ್ನು ಊಹಿಸಿಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ. ಪೊಲೀಸರು ಇಲ್ಲದೆ ಯಾರೂ ನೆಮ್ಮದಿಯಾಗಿ ಇರಲು ಆಗುವುದಿಲ್ಲ. ಕಾನೂನು ಪಾಲಿಸುವುದು ಪೊಲೀಸರ ಜವಾಬ್ದಾರಿ. ಅದು ಕೆಲವರಿಗೆ ಒಳಿತು ಮತ್ತೊಬ್ಬರಿಗೆ ನಷ್ಟವುಂಟು ಮಾಡುತ್ತದೆ. ಆದರೂ ನಾವು ಹೆಚ್ಚು ದ್ವೇಷಕ್ಕೆ ಒಳಗಾಗುತ್ತೇವೆಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಧರಣಿಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಜಿಲ್ಲಾ ಪಂಚಾಯಿತಿ ಸುನಿತಾ, ಪವಿತ್ರಾ ಹಾಜರಿದ್ದರು. ಮಕ್ಕಳ ರಕ್ಷಣಾ ಘಟಕದ ಕಾಂತರಾಜು ಕಾರ್ಯಕ್ರಮ ನಿರೂಪಿಸಿದರು.

## ಶಾಸಕರ ಪ್ರಶ್ನೆಗೆ ಸಿಗದ ಉತ್ತರ: ಸ್ಪೀಕರ್ ಸಭಾತ್ಯಾಗ

» ಮೊದಲನೇ ಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಉತ್ತರ ಒದಗಿಸದ ಲೋಕೋಪಯೋಗಿ, ಪಶು ಸಂಗೋಪನೆ, ಸಾರಿಗೆ, ಐಟಿ-ಬಿಟಿ, ಡಿಪಿಎಆರ್ ಮತ್ತು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟೀಸ್ ನೀಡಲು ಮುಖ್ಯಮಂತ್ರಿಗೆ ಸ್ಪೀಕರ್ ತಿಳಿಸಿರುವ ಹಿನ್ನಲೆ, ಹಿರಿಯ ಐಎಎಸ್ ಅಧಿಕಾರಿಗಳೂ ಆದ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಬಿಸಿ ಮುಟ್ಟಿದೆ. ಮತ್ತೊಂದೆಡೆ ಮುಖ್ಯಮಂತ್ರಿ ಸೂಚನೆ ಹಿನ್ನಲೆ ಮಧ್ಯಾಹ್ನ ಸಿಎಸ್ ಶಾಲಿನಿ ರಜನೀಶ್ ಅಧಿಕಾರಿಗಳ ಸಭೆ ನಡೆಸಿದರು.

**ವಿಧಾನ ಪರಿಷತ್‌ನಲ್ಲೂ ಸದ್ದು**

ವಿಧಾನ ಪರಿಷತ್‌ನಲ್ಲೂ ಸಚಿವರ ಹಾಜರಾತಿ ವಿಚಾರ ಚರ್ಚೆಗೆ ಗ್ರಾಸವಾಯಿತು. ಕಡ್ಡಾಯ ಹಾಜರಾತಿ ಅಂದರೂ ಸಚಿವರು ಸದನಕ್ಕೆ ಬಂದಿಲ್ಲ. ಅಧಿಕಾರಿಗಳೂ ಇಲ್ಲ, ಹೀಗಾದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಭಾಪತಿಗಳನ್ನು ಪ್ರಶ್ನಿಸಿದ್ದಾರೆ. ಯಾರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಹೇಳಿ ಎಂದು ಪ್ರಶ್ನಿಸಿದರು.

## ಮಹಿಳೆಯರ ಸಾಧನೆಯನ್ನು ಸಮಾಜ ಗೌರವಿಸಬೇಕು

• ಪ್ರಜೋದಯ ವರದಿ

**ಅರಕಲಗೂಡು:** ಉನ್ನತಮಟ್ಟದ ಸಾಧನೆ ಮಾಡುತ್ತಿರುವ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ದಾಪುಗಾಲನ್ನಿಡುತ್ತಿದ್ದು, ಅವರ ಸಾಧನೆಯನ್ನು ಸಮಾಜ ಗೌರವಿಸಬೇಕೆಂದು ಜಿಲ್ಲಾ ಬ್ರಾಹ್ಮಣ ಮಹಾಸಭಾ ನಿರ್ದೇಶಕರಾದ ಶ್ವೇತಾ ಅವರು ತಿಳಿಸಿದರು.



ಪಟ್ಟಣದ ಕೋಟೆ ಕೋದಂಡರಾಮ ಪ್ರವಚನ ಮಂದಿರಲ್ಲಿ ವಿ.ಪ್ರ. ಮಹಿಳಾ ಬಳಗ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಮತ್ತು ಮಹಿಳಾ ಬಳಗದ ವಾರ್ಷಿಕೋತ್ಸವ ಸಮಾರಂಭ ದಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಉನ್ನತ ಸ್ಥಾನ ನೀಡಲಾಗಿದೆ. ರಾಮಾಯಣ, ಮಹಾಭಾರತದಲ್ಲಿ ಹೆಣ್ಣಿನ ಮಾನರಕ್ಷಣೆಗಾಗಿ ಯುದ್ಧಗಳೆ ನಡೆದಿವೆ.ಕುಟುಂಬ ಸಮಾಜ ಎರಡನ್ನೂ ಸಮತೋಲನದಲ್ಲಿ ನಡೆಸುವ ಸಾಮರ್ಥ್ಯ ಮಹಿಳೆಯರಲ್ಲಿದೆ. ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರ, ಅನ್ಯಾಯಗಳನ್ನು ತಡೆಯಲು ಗಂಡು ಮಕ್ಕಳಿಗೆ ಸಂಸ್ಕಾರ ನೀಡುವಲ್ಲಿ ಮಹಿಳೆಯರು ಇನ್ನಷ್ಟು ಜಾಗ್ರತೆ ವಹಿಸಬೇಕಿದೆ ಎಂದರು.

ಬೆಳಕು ವೃದ್ಧಾಶ್ರಮದ ಸಂಸ್ಥಾಪಕಿ ಕೆ.ಗೀತಾ ಅವರು ಮಾತನಾಡಿ, ಮಹಿಳೆಯರ ಸಾಧನೆ ಉನ್ನತವಾಗಿದ್ದರೂ ಹಲವು ಅಡೆತಡೆಗಳು ಅಡ್ಡಿಯನ್ನುಂಟು ಮಾಡುತ್ತಿವೆ. ಸಮಾಜ ಹಾಗೂ ಕುಟುಂಬದವರ ಬೆಂಬಲ ದೊರೆತಲ್ಲಿ ಇನ್ನೂ ಹೆಚ್ಚಿನ ಸಾಧನೆ ಸಾಧ್ಯವಾಗಲಿದೆ ಎಂದರು.

ಜೀವ ವಿಮಾ ಸಂಸ್ಥೆ ಪ್ರತಿನಿಧಿ ಅನುರಾಧ ಅವರು ಕಾರ್ಯಕ್ರಮ ಉದ್ಘಾಟಿಸಿದರು. ವಿ.ಪ್ರ.ಮಹಿಳಾ ಬಳಗ ಸಾಮಾಜಿಕ ಹಾಗೂ ಧಾರ್ಮಿಕವಾಗಿ ನಡೆಸುತ್ತಿರುವ ಕಾರ್ಯ ಚಟುವಟಿಕೆಗಳು ಪ್ರಶಂಸನೀಯವಾಗಿದೆ ಎಂದು ಮೆಚ್ಚುಗೆ ಸೂಚಿಸಿದರು.

ಮಹಿಳಾ ಬಳಗದ ಅಧ್ಯಕ್ಷೆ ರುಕ್ಮಿಣಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರಿ ಶಾಲೆ ಶಿಕ್ಷಕಿಯಾಗಿ ನಿವೃತ್ತರಾದ ಬಳಿಕ ತನ್ನಗಳಿಕೆಯಲ್ಲಿ ಬೆಳಕು ವೃದ್ಧಾಶ್ರಮ ತೆರೆದು ಅಸಹಾಯಕರಿಗೆ ಆಸರೆಯಾಗಿ ಕಾರ್ಯನಿರ್ವಹಿಸುತ್ತಿರುವ ಗೀತಾ ಅವರ ಸಾಮಾಜಿಕ ಸೇವೆ ಯನ್ನು ಪ್ರಶಂಸಿಸಿ ಗೌರವಿಸಲಾ ಯಿತು. ಮಕ್ಕಳು ಮತ್ತು ಮಹಿಳೆ ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮಹಿಳಾ ಬಳಗದ ಕಾರ್ಯದರ್ಶಿ ಪಿ.ಎಸ್.ಸುಧಾ, ಖಜಾಂಚಿ ಸವಿತಾ, ಗೀತಾ, ನಾಗಮಣಿ, ವತ್ಸಲಾ, ಲೀಲಾ, ಪದ್ಮ, ಉಮಾ, ಪದ್ಮಶ್ರೀ, ಪವಿತ್ರ, ಮಧುಶ್ರೀ, ಸರಸ್ವತಿ ಉಪಸ್ಥಿತರಿದ್ದರು.

## ಅಮೇಜಾನ್, ಫ್ಲಿಪ್‌ಕಾರ್ಟ್‌ನಲ್ಲಿ ಹಾಲು ಮಾರಾಟ ನಿರ್ಬಂಧಿಸಿ

### ಕರ್ನಾಟಕ ಪ್ರಾಂತ ರೈತ ಸಂಘದಿಂದ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಅಮೆಜಾನ್, ಫ್ಲಿಪ್‌ಕಾರ್ಟ್ ಒಂದು ಲೀಟರ್ ಹಾಲನ್ನು ಒಂದು ರೂಪಾಯಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಿರುವುದು ಅತ್ಯಂತ ಖಂಡನೀಯ. ಕೂಡಲೇ ಮಾರಾಟ ನಿಲ್ಲಿಸಿ, ಆನ್‌ಲೈನ್ ವೇದಿಕೆಗಳನ್ನು ನಿರ್ಬಂಧಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ರಾಜ್ಯದಲ್ಲಿ ಕೋಟ್ಯಾಂತರ ಸಂಖ್ಯೆಯಲ್ಲಿ ರೈತರು ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದು ತಮ್ಮ ಜೀವನೋಪಾಯಕ್ಕಾಗಿ ಅದನ್ನೇ ಅವಲಂಬಿಸಿದ್ದಾರೆ. ಕರ್ನಾಟಕ ಹಾಲು ಒಕ್ಕೂಟ ಒಂದು ಕಡೆ ರೈತರಿಗೆ ಉತ್ಪಾದನಾ ವೆಚ್ಚ ನೀಡಲು, ಇನ್ನೊಂದು ಕಡೆ ಸಂಗ್ರಹಿಸಿದ ಹಾಲನ್ನು ಪೂರ್ಣ ವಾಗಿ ಮಾರಾಟ ಮಾಡಲು ಸಾಧ್ಯವಾಗದೆ ಪ್ರಯಾಸ ಪಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಹಕಾರಿ ಹಾಲು ಒಕ್ಕೂಟವನ್ನು ತೀವ್ರ ಬಿಕ್ಕಟ್ಟಿಗೆ ದೂಡುವ ಇಂತಹ ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್ ಮಾರಾಟದ ಕುತಂತ್ರವನ್ನು ತಕ್ಷಣ ನಿಲ್ಲಿಸದಿದ್ದರೆ ಅಮೆಜಾನ್ ಕಚೇರಿಗಳ ಎದುರು ರೈತರ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆಂದು ಎಚ್ಚರಿಕೆ ನೀಡಿದ್ದಾರೆ.

ಈ ಮಾರುಕಟ್ಟೆ ಕುತಂತ್ರದ ವಿರುದ್ಧ ಸಹಕಾರಿ ಒಕ್ಕೂಟಗಳನ್ನು ರಕ್ಷಿಸಲು ವಿಫಲರಾಗಿರುವ ಹಾಗು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಸಹಕಾರಿ ಸಂಸ್ಥೆಗಳ ಮೇಲೆ ಸವಾರಿ ಮಾಡುವ ಮೂಲಕ ಕಾರ್ಪೊರೇಟ್ ದಾಳಿಗೆ ಸಿಲುಕಿಸುತ್ತಿರುವ ಕೇಂದ್ರ ಸಹಕಾರಿ ಸಚಿವ ಅಮಿತ್ ಶಾ ಅವರು ಈ ಮಾರಾಟ ಕುತಂತ್ರದ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದೆ.

ಈ ಹಿಂದೆ ರಿಲಯನ್ಸ್ ಕಂಪನಿ ಜಿಯೋ ಮೊಬೈಲ್ ಸಿಮ್‌ಗಳನ್ನು ಉಚಿತವಾಗಿ ಕೊಟ್ಟು ಅತ್ಯಂತ ಕಡಿಮೆ ದರದಲ್ಲಿ ಆಕರ್ಷಕ ಡಾಟಾ ಪ್ಯಾಕ್‌ಗಳನ್ನು ಘೋಷಿಸಿ, ಗ್ರಾಹಕರನ್ನು ಸೆಳೆದು ಸರ್ಕಾರಿ ದೂರ ಸಂಪರ್ಕ ಸಂಸ್ಥೆಯಾದ ಬಿಎಸ್‌ಎನ್‌ಎಲ್‌ನ್ನು ನಷ್ಟಕ್ಕೆ ತಳ್ಳಿ ಕ್ರಮೇಣ ಅದನ್ನು ಮುಚ್ಚುವಂತೆ ಮಾಡುವ ಹುನ್ನಾರ ನಡೆದಿದೆ ಜೊತೆಗೆ ಖಾಸಗಿ ದೂರಸಂಪರ್ಕ ಕಂಪನಿಗಳು ಡಾಟಾ ಪ್ಯಾಕ್‌ಗಳ ದರವನ್ನು ಹೆಚ್ಚಳ ಮಾಡಿ ಗ್ರಾಹಕರಿಂದ ಸುಲಿಗೆ ಮಾಡುತ್ತಿವೆ. ಇದೇ ರೀತಿ ಒಂದು ರೂ ದರದಲ್ಲಿ ಒಂದು ಲೀಟರ್ ಹಾಲನ್ನು ಮಾರಾಟ ಮಾಡುವುದು ಮುಂದೊಂದು ದಿನ ರೈತರ ಜೀವನಾಡಿಗಳಾಗಿರುವ ಹಾಲು ಉತ್ಪಾದಕ ಸಹಕಾರ ಸಂಘಗಳನ್ನು ಸಂಪೂರ್ಣ ನಾಶ ಮಾಡುವುದೇ ಆಗಿದೆ. ಹಾಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಡಲೇ ಮಧ್ಯ ಪ್ರವೇಶ ಮಾಡಿ ರೈತರ ಹೈನುಗಾರಿಕೆಯನ್ನು ಉಳಿಸಬೇಕೆಂದು ಆಗ್ರಹಿದೆ.

## ಸರ್ಕಾರಿ ಜಾಗದಲ್ಲಿ ಸ್ಮಶಾನ: ತೆರವಿಗೆ ಒತ್ತಾಯ



• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಮಾವನೂರಿನ ಸರ್ಕಾರಿ ಜಾಗದಲ್ಲಿ ಏಕಾಏಕಿ ಖಬರಸ್ತಾನ್ ನಿರ್ಮಿಸಿದ್ದು, ತೆರವುಗೊಳಿಸಬೇಕೆಂದು ಆಗ್ರಹಿಸಿ ಹಿಂದೂಪರ ಸಂಘಟನೆ ಕಾರ್ಯ ಕರ್ತರು ಶಿರಸ್ತೇದಾರ್‌ಗೆ ಸೋಮವಾರ ಮನವಿ ಸಲ್ಲಿಸಿದರು.

ಗ್ರಾಮದ ಸರ್ವೆ ನಂ.99ರಲ್ಲಿ ರಾತ್ರೋರಾತ್ರಿ, ಮುಸ್ಲಿಮರ ಸ್ಮಶಾನ ತಲೆ ಎತ್ತಿದೆ. ರಾಷ್ಟ್ರೀಯ ಹೆದ್ದಾರಿಗೆ ಸೇರಿರುವ ಜಾಗ ಅದಾಗಿದ್ದು ಕೆರೆ ಸಮೀಪದಲ್ಲೇ ಇರುವುದರಿಂದ ನಿತ್ಯ ನೂರಾರು ಜನರು ಬರುತ್ತಾರೆ. ಜಾನುವಾರುಗಳಿಗೆ ನೀರು ಕುಡಿಸಲು, ಬಟ್ಟೆ ತೊಳೆಯಲು ಗ್ರಾಮಸ್ಥರು ಬರುವ ಜಾಗ ಅದಾಗಿದೆ. ಆದರೆ ಏಕಾಏಕಿ ಖಬರಸ್ತಾನ್ ನಿರ್ಮಿಸಿರುವುದರಿಂದ ತೊಂದರೆಯಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲೇ ಮುಸ್ಲಿಂ ಸ್ಮಶಾನ ಮಾಡಲಾಗಿದೆ. ಮುಂದೆ ರಸ್ತೆ ಅಭಿವೃದ್ಧಿ ಸಮಯದಲ್ಲಿ ತೆರವು ಮಾಡದಿದ್ದರೆ ಗಲಭೆ ಸೃಷ್ಟಿಯಾಗುವ ಸಾಧ್ಯತೆಯಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹಾಕಿರುವ ಕಬ್ಬಿಣದ ಸುರಕ್ಷತಾ ಸರಳುಗಳನ್ನು ಮುರಿದು ದಾರಿ ಮಾಡಿಕೊಂಡಿದ್ದು ಖಂಡನೀಯವೆಂದರು.

ಮುಸ್ಲಿಮರು ಕೆರೆ ಜಾಗ ಒತ್ತುವರಿ ಮಾಡಿಕೊಂಡಿದ್ದು, ಈ ಸಂಬಂಧ ಸರ್ವೆ ಮಾಡಿ ಹಾಗು ದಾಖಲೆ ಪರಿಶೀಲಿಸಿ ಒತ್ತುವರಿ ತೆರವುಗೊಳಿಸಬೇಕು. ಇಲ್ಲವಾದರೆ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು. ಹಿಂದೂ ಸಂಘಟನೆ ಮುಖಂಡರಾದ ರಘು ಸಕಲೇಶಪುರ, ಧರ್ಮೇಶ್, ದುಷ್ಯಂತ್‌ಗೌಡ, ಸಂತೋಷ್, ಮಹೇಶ್ ಹಾಜರಿದ್ದರು.

## ಮಕ್ಕಳಿಗೆ ಸಮಾಜದ ಇತಿಹಾಸ ತಿಳಿಸುವ ಕೆಲಸವಾಗಲಿ

• ಪ್ರಜೋದಯ ವರದಿ

**ಅರೇಹಳ್ಳಿ:** ದೇಶದ ಪ್ರತಿಯೊಂದು ಜಾತಿ ಆಧಾರಿತ ಸಮುದಾಯಕ್ಕೆ ತನ್ನದೇ ಆದ ಸಂಸ್ಕಾರ, ಸಂಸ್ಕೃತಿ ಹಾಗು ಪರಂಪರೆ ಇದ್ದು ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡ ಬೇಕಾಗಿದೆ ಎಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿಯ ಗುಜ್ಜನಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ರಾಣಿಯರ್ ಸಮಾಜ ಸೇವಾ ಸಂಘದಿಂದ ಆಯೋಜಿಸಿದ್ದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಿರಿಯರು ತಮ್ಮಮಕ್ಕಳಿಗೆ ಸಮಾಜ ಹುಟ್ಟಿದ ಇತಿಹಾಸ ಹೇಳಿಕೊಡಬೇಕು. ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೂ ಸಹ ಸ್ವಾಭಿಮಾ ನದ ಬದುಕು ಸಾಗಿಸಿ, ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡುವುದರ ಮೂಲಕ ಸ್ವಯಂ ಏಳಿಗೆ ಹೊಂದಲು ಬದ್ಧರಾಗಬೇಕೆಂದರು.

ರಾಣಿಯರ್ ಸಮಾಜದ ಜಿಲ್ಲಾಧ್ಯಕ್ಷ ಮೊನಪ್ಪ ಹೆಗ್ಗಡ್ಡೆ ಅವರು ಮಾತನಾಡಿ, ಜಿಲ್ಲೆಯ ರಾಣಿಯರ್ ಸಮಾಜದ ಸಂಘವು ನಾನಾ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ. ನಮ್ಮ ಸಮಾಜವು ಸಾಮಾಜಿಕ ಕೇತ್ರಕ್ಕೆ ತನ್ನದೇಯಾದ ಕೊಡುಗೆಗಳನ್ನು ನೀಡುತ್ತಿದೆ. ಈ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಹಾಗು ಶಿಕ್ಷಕರನ್ನು ಗುರುತಿಸಿ ಸನ್ಮಾನ ಮಾಡಲಾಗಿದೆ. ಸಮಾಜದ ಮೇಲಾಗುವ ದೌರ್ಜನ್ಯವನ್ನು ಖಂಡಿಸಿ ಸಾಂವಿಧಾನಿಕವಾಗಿ ನ್ಯಾಯ ಪಡೆದುಕೊಳ್ಳಲು ನಾವೆಲ್ಲರೂ ಒಂದಾಗಬೇಕಿದೆ ಎಂದರು.

ಶಾಸಕ ಹೆಚ್.ಕೆ.ಸುರೇಶ್, ಅಖಿಲ ಕರ್ನಾಟಕ ರಾಣಿಯರ್ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ ತನಿಯಪ್ಪ ರಾಣಿಯರ್, ಮಾಜಿ ಅಧ್ಯಕ್ಷ ಜಯಾರಣ್ಯ, ಗೌರವಾಧ್ಯಕ್ಷ ಎಂ.ಡಿ. ಪ್ರಕಾಶ್, ವಲಯ ಸಮಿತಿ ಅಧ್ಯಕ್ಷ ಕೆ.ಮಹಾಬಲ, ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ಎಂ. ಸತೀಶ್, ಜಿಲ್ಲಾ ಉಪಾಧ್ಯಕ್ಷ ಕೇಶವ, ಪ್ರಧಾನ ಕಾರ್ಯದರ್ಶಿ ಶಿವಣ್ಣ ಗುಜ್ಜನಹಳ್ಳಿ, ಸತೀಶ್ ಸುರತ್ಕಲ್, ಅಮಿತ್ ಶೆಟ್ಟಿ, ಶೇಖರ್, ಧನಂಜಯ್ ಅರಸ್ ಇತರರಿದ್ದರು.

## ಚಂದ್ರಪ್ರಸಾದ್ ತ್ಯಾಗಿ ಹಾಕಿಕೊಟ್ಟ ಮಾರ್ಗದಲ್ಲಿ ಸಾಗೋಣ

• ಪ್ರಜೋದಯ ವರದಿ

**ಹಾಸನ:** ದಲಿತ ಚಳವಳಿಯ ನೇತಾರ ಬಿ.ವಿ. ಚಂದ್ರ ಪ್ರಸಾದ್ ತ್ಯಾಗಿ ಅವರ 20ನೇ ವರ್ಷದ ಸಂಸ್ಮರಣೆ ಕಾರ್ಯಕ್ರಮ ನಗರದ ಶ್ರಮ ಕಚೇರಿಯಲ್ಲಿ ನೆರವೇರಿತು.




ದಲಿತ ಮುಖಂಡ ಹೆಚ್.ಕೆ.ಸಂದೇಶ್ ಅವರು ಮಾತನಾಡಿ, ಚಂದ್ರಪ್ರಸಾದ್ ತ್ಯಾಗಿ ಅವರು ಜಾತಿ ತಾರತಮ್ಯ-ಅಸ್ಪೃಶ್ಯತಾ ಆಚರಣೆಗಳ ವಿರುದ್ಧ ಪ್ರಬಲ ಹೋರಾಟ ರೂಪಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಹೋರಾಟದ ಕಿಚ್ಚನ್ನು ಬೆಳೆಸಿಕೊಂಡಿದ್ದರು. ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ಸೇರಿ ಅಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆ ವಿರುದ್ಧ ಪ್ರತಿಭಟಿಸಿದರೆಂದರು.

ಪ್ರೊ.ಬಿ.ಕೃಷ್ಣಪ್ಪ, ಎನ್.ಗಿರಿಯಪ್ಪ, ದೇವನೂರು ಮಹದೇವ ಸೇರಿ ಪ್ರಮುಖರ ಜೊತೆ ಗೂಡಿ ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸಿದ ಪ್ರಮುಖರಲ್ಲಿ ಒಬ್ಬರಾಗಿದ್ದ ಚಂದ್ರಪ್ರಸಾದ್ ತ್ಯಾಗಿ ವಿಐಎಸ್ಎಲ್ ಕಾರ್ಖಾನೆ ನೌಕರಿಗೆ ರಾಜೀನಾಮೆ ನೀಡಿ ಹಾಸನಕ್ಕೆ ವಾಪಾಸ್ಸಾಗಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿದ್ದರೆಂದರು.

ಸಿದ್ದಿಪುರ ದಲಿತರ ಭೂಮಿ ಹೋರಾಟ, ಚನ್ನಂಗಿಹಳ್ಳಿ ದಲಿತರ ಹೋರಾಟ, ಬಾಳ್ಳುಪೇಟೆ ಭೂ ಹೋರಾಟ, ಕಾಫಿ ಪ್ಲಾಂಟೇಷನ್ ಮಾಲೀಕರ ಒತ್ತುವರಿ ತೆರುವುಗೊಳಿಸಿ ಭೂಮಿ ಇಲ್ಲದ ವರಿಗೆ ಮತ್ತು ದಲಿತರಿಗೆ ಆ ಭೂಮಿ ಹಂಚಲು ಸಾಕಷ್ಟು ಪ್ರತಿಭಟನೆ ನಡೆಸಿದ್ದರೆಂದು ಸ್ಮರಿಸಿದರು.

ಪ್ರಸ್ತುತ ದಿನಗಳಲ್ಲಿ ದಲಿತ ಸಮುದಾಯ ಅಡಕತ್ತರಿಯಲ್ಲಿ ಸಿಲುಕಿದೆ. ಒಳಮೀಸಲಾತಿ ವಿಷಯದಲ್ಲಿ ಎಡಗೈ ಮತ್ತು ಬಲಗೈ ಎಂದು ಸಮುದಾಯ ಪಡೆಯುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ತ್ಯಾಗಿಯವರ ಆಶಯ ಮತ್ತು ಚಿಂತನೆಗಳನ್ನು ಮುಂದು ವರೆಸುವ ಮೂಲಕ ದಲಿತರ ನಡುವೆ ಏಕತೆಯನ್ನು ಸ್ಥಾಪಿಸಬೇಕೆಂದರು.

ಮುಖಂಡರಾದ ಕೃಷ್ಣದಾಸ್, ಎಂ.ಜಿ.ಪೃಥ್ವಿ, ಈರೇಶ್ ಹಿರೇಹಳ್ಳಿ, ಅಣಚಿಹಳ್ಳಿ ವೀರಭದ್ರಪ್ಪ, ಎಂ.ಬಿ.ಪುಟ್ಟಸ್ವಾಮಿ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ನಿವೃತ್ತ ಪ್ರಾಂಶುಪಾಲ ಅತ್ನಿ ಕೃಷ್ಣಯ್ಯ, ಪ್ರಮೀಳಾ ಕೊಟ್ಟೂರು, ನಾಯಕರಹಳ್ಳಿ ಮಲ್ಲಯ್ಯ, ಕೆ.ಆರ್. ತಿಮ್ಮಯ್ಯ ಮತ್ತಿತರರು ಮಾತನಾಡಿದರು.

ಬ್ಯಾಂಕ್ ನೌಕರರ ಮುಖಂಡ ಬಿ.ಎ. ಪರಮಶಿವಯ್ಯ, ದಸಂಸ ಉಮೇಶ್, ಜೈ ಭೀಮ್ ಬ್ರಿಗೇಡ್ ರಾಜೇಶ್, ಸಿಐಟಿಯು ಅರವಿಂದ್, ತೋಟೇಶ್ ನಿಟ್ಟೂರು, ರಾಮು ಮತ್ತಿತರರಿದ್ದರು.

## ಎಲ್‌ಪಿಜಿ ಗ್ರಾಹಕರಿಗೆ ಬಯೊಮೆಟ್ರಿಕ್ ದೃಢೀಕರಣ ಕಡ್ಡಾಯಗೊಳಿಸಿದ ಕೇಂದ್ರ

**ನವದೆಹಲಿ:** ಗೃಹಬಳಕೆಯ ಅಡುಗೆ ಅನಿಲ ಸರಬರಾಜಿನಲ್ಲಿ ದುರುಪಯೋಗ ವನ್ನು ತಡೆ ಗಟ್ಟಲು ಮತ್ತು ವಿತರಣೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಹತ್ವದ ನಿರ್ಧಾರ ಕೈ ಗೊಂಡಿದೆ. ಗ್ರಾಹಕರಿಗೆ ಬಯೊಮೆಟ್ರಿಕ್ ಆಧಾರ್ ಇ-ಕೆವೈಸಿಯನ್ನು ಕಡ್ಡಾಯ ಗೊಳಿಸಿದೆ.

ದೇಶದ ಎಲ್ಲಾ ಎಲ್‌ಪಿಜಿ ಗ್ರಾಹಕರು ತಮ್ಮ ಬಯೊಮೆಟ್ರಿಕ್ ಆಧಾರ್ ದೃಢೀಕರಣವನ್ನು ಪೂರ್ಣಗೊಳಿಸುವುದು ಕಡ್ಡಾಯ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.

ಈ ಕುರಿತು, ಎಲ್ಲಾ ಗ್ರಾಹಕರು ಬಯೊಮೆಟ್ರಿಕ್ ಆಧಾರ್ ದೃಢೀಕರಣ ವನ್ನು ಪೂರ್ಣ ಗೊಳಿಸಬೇಕಾಗುತ್ತದೆ. ಈಗ ನಿಮ್ಮ ಮನೆಯಿಂದಲೇ ತೈಲ ಕಂಪನಿಯ ಮೊಬೈಲ್ ಆ್ಯಪ್ ಮತ್ತು ಆಧಾರ್ ಫೇಸ್ ಆರ್‌ಡಿ ಅಪ್ಲಿಕೇಶನ್ ಬಳಸಿ ಎಂದು ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿ ಕೊಂಡಿದೆ. ಹಾಗೆಯೇ, ಎಲ್‌ಪಿಜಿ ವಿತರಕ ರನ್ನು ಸಂಪರ್ಕಿಸುವಂತೆ ಸಲಹೆ ನೀಡಿರುವ ಸಚಿವಾಲಯ, ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆಯನ್ನೂ ನೀಡಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019